# ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949

27.01.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 36ನೇ ಸಂಪುಟದ 1ನೇ ಸಂಚಿಕೆಯಲ್ಲಿ 02 ರಿಂದ 20ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ – I
### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಅರ್ಥವಿವರಣೆ

### ಅಧ್ಯಾಯ – II
### ಭಾರತದ ಚಾರ್ಟರ್ಡ್ ಅಕೌಂಟೆಂಟರ ಸಂಸ್ಥೆ

3. ಸಂಸ್ಥೆಯ ನಿಗಮನ
4. ರಿಜಿಸ್ಟರಿನಲ್ಲಿ ಹೆಸರುಗಳ ನಮೂದು
5. ಫೆಲೋ ಸದಸ್ಯರು ಮತ್ತು ಸಹ ಸದಸ್ಯರು
6. ವೃತ್ತಿ ಪ್ರಮಾಣಪತ್ರ
7. ಸದಸ್ಯರು ಚಾರ್ಟರ್ಡ್ ಅಕೌಂಟೆಂಟ್ ಎಂಬುದಾಗಿ ಕರೆಸಿಕೊಳ್ಳುವುದು
8. ಅಸಮರ್ಥತೆಗಳು

### ಅಧ್ಯಾಯ – III
### ಸಂಸ್ಥೆಯ ಪರಿಷತ್ತು

9. ಸಂಸ್ಥೆಯ ಪರಿಷತ್ತಿನ ರಚನೆ
10. ಪರಿಷತ್ತಿನ ಚುನಾವಣಾ ವಿಧಾನ
11. ಚುನಾವಣೆ ನಡೆಸಲು ಅಥವಾ ನಾಮನಿರ್ದೇಶನ ಮಾಡಲು ತಪ್ಪಿದ್ದಲ್ಲಿ ನಾಮನಿರ್ದೇಶನ
12. ಅಧ್ಯಕ್ಷ ಮತ್ತು ಉಪಾಧ್ಯಕ್ಷ
13. ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದು ಮತ್ತು ಆಕಸ್ಮಿಕ ಖಾಲಿ ಸ್ಥಾನಗಳು
14. ಪರಿಷತ್ತಿನ ಅವಧಿ ಮತ್ತು ವಿಸರ್ಜನೆ
15. ಪರಿಷತ್ತಿನ ಪ್ರಕಾರ್ಯಗಳು
16. ಸಿಬ್ಬಂದಿ, ಸಂಭಾವನೆ ಮತ್ತು ಭತ್ಯೆಗಳು
17. ಪರಿಷತ್ತಿನ ಸಮಿತಿಗಳು
18. ಪರಿಷತ್ತಿನ ಹಣಕಾಸು

### ಅಧ್ಯಾಯ – IV
### ಸದಸ್ಯರ ರಿಜಿಸ್ಟರು

19. ರಿಜಿಸ್ಟರು
20. ರಿಜಿಸ್ಟರಿನಿಂದ ಹೆಸರು ತೆಗೆದುಹಾಕುವುದು

## ಅಧ್ಯಾಯ – V
**ದುರ್ನಡತೆ**

21. ಸಂಸ್ಥೆಯ ಸದಸ್ಯರ ದುರ್ನಡತೆ ಸಂಬಂಧದಲ್ಲಿನ ವಿಚಾರಣೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ

22. ವೃತ್ತೀಯ ದುರ್ನಡತೆಯನ್ನು ಪರಿಭಾಷಿಸುವುದು

22ಎ. ಅಪೀಲುಗಳು

## ಅಧ್ಯಾಯ – VI
**ಪ್ರಾದೇಶಿಕ ಪರಿಷತ್ತುಗಳು**

23. ಪ್ರಾದೇಶಿಕ ಪರಿಷತ್ತುಗಳ ರಚನೆ ಮತ್ತು ಪ್ರಕಾರ್ಯಗಳು

## ಅಧ್ಯಾಯ – VII
**ದಂಡನೆಗಳು**

24. ಸದಸ್ಯನೆಂದು ಸುಳ್ಳು ಕ್ಲೇಮು ಮಾಡುವುದು, ಇತ್ಯಾದಿಗಳಿಗಾಗಿ ದಂಡನೆ

24ಎ. ಪರಿಷತ್ತಿನ ಹೆಸರನ್ನು ಬಳಸುವುದು, ಚಾರ್ಟರ್ಡ್ ಅಕೌಂಟೆನ್ಸಿ ಪದವಿ ನೀಡುವುದು, ಇತ್ಯಾದಿಗಳಿಗೆ ದಂಡನೆ

25. ಕಂಪನಿಗಳು ಅಕೌಂಟೆನ್ಸಿ ವೃತ್ತಿಯಲ್ಲಿ ತೊಡಗದಿರುವುದು

26. ಅರ್ಹತೆಯಿಲ್ಲದ ವ್ಯಕ್ತಿಗಳು ದಸ್ತಾವೇಜುಗಳಿಗೆ ಸಹಿ ಮಾಡದಿರುವುದು

27. ಶಾಖಾ ಕಚೇರಿಗಳ ನಿರ್ವಹಣೆ

28. ಪ್ರಾಸಿಕ್ಯೂಷನ್‌ಗೆ ಅನುಮತಿ

## ಅಧ್ಯಾಯ – VIII
**ಸಂಕೀರ್ಣ**

29. ಪರಸ್ಪರತೆ

30. ವಿನಿಯಮ ರಚನಾಧಿಕಾರ

30ಎ. ವಿನಿಯಮಗಳನ್ನು ರಚಿಸುವಂತೆ ನಿರ್ದೇಶಿಸಲು ಅಥವಾ ವಿನಿಯಮಗಳನ್ನು ರಚಿಸಲು ಅಥವಾ ಅವುಗಳನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರದ ಅಧಿಕಾರಗಳು

30ಬಿ. ವಿನಿಯಮಗಳನ್ನು ಮಂಡಿಸುವುದು

31. ಉಲ್ಲೇಖಗಳ ಅರ್ಥ ವಿವರಣೆ

32. ಭಾಗ-ಬಿ ರಾಜ್ಯಗಳಲ್ಲಿ ಅಕೌಂಟೆಂಟರಾಗಿ ವೃತ್ತಿ ನಡೆಸಲು ಅಕೌಂಟೆಂಟರ ಹಕ್ಕುಗಳಿಗೆ ಈ ಅಧಿನಿಯಮವು ಬಾಧಕವನ್ನುಂಟುಮಾಡದಿರುವುದು

33. ಭಾರತ ಕಂಪನಿಗಳ ಅಧಿನಿಯಮ, 1913 ಇದರ 144ನೇ ಪ್ರಕರಣದ ತಿದ್ದುಪಡಿ.

**ಮೊದಲನೆಯ ಅನುಸೂಚಿ**

**ಎರಡನೆಯ ಅನುಸೂಚಿ**

# ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949

(1949ರ ಅಧಿನಿಯಮ ಸಂಖ್ಯೆ 38)

[ಮೇ 1, 1949]

ಚಾರ್ಟರ್ಡ್ ಅಕೌಂಟೆಂಟರ ವೃತ್ತಿಯನ್ನು ವಿನಿಯಮಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ಒಂದು ಅಧಿನಿಯಮ.

ಚಾರ್ಟರ್ಡ್ ಅಕೌಂಟೆಂಟರ ವೃತ್ತಿಯನ್ನು ವಿನಿಯಮಗೊಳಿಸುವುದಕ್ಕಾಗಿ ಮತ್ತು ಆ ಉದ್ದೇಶಕ್ಕಾಗಿ ಚಾರ್ಟರ್ಡ್ ಅಕೌಂಟೆಂಟರ ಒಂದು ಸಂಸ್ಥೆಯನ್ನು ಸ್ಥಾಪಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಈ ಮೂಲಕ ಈ ಮುಂದಿನಂತೆ ಅಧಿನಿಯಮಿಸಲಾಗಿದೆ:-

## ಅಧ್ಯಾಯ - I
## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಚಾರ್ಟರ್ಡ್ ಅಕೌಂಟೆಂಟ್ ಅಧಿನಿಯಮ, 1949 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಅರ್ಥವಿವರಣೆ.-**(1) ಈ ಅಧಿನಿಯಮದಲ್ಲಿ ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,-

(ಎ) "ಸಹ ಸದಸ್ಯ" ಎಂದರೆ ಸಂಸ್ಥೆಯ ಒಬ್ಬ ಸಹ ಸದಸ್ಯ;

(ಬಿ) "ಚಾರ್ಟರ್ಡ್ ಅಕೌಂಟೆಂಟ್" ಎಂದರೆ ಸಂಸ್ಥೆಯ ಸದಸ್ಯನಾಗಿರುವ ಒಬ್ಬ ವ್ಯಕ್ತಿ;

(ಸಿ) "ಪರಿಷತ್ತು" ಎಂದರೆ ಸಂಸ್ಥೆಯ ಪರಿಷತ್ತು;

(ಡಿ) "ನಿರ್ಬಂಧಿತ ಪ್ರಮಾಣಪತ್ರ ಧಾರಕ" ಎಂದರೆ ನಿರ್ಬಂಧಿತ ಪ್ರಮಾಣ ಪತ್ರಗಳ ನಿಯಮಗಳು, 1932ರ ಅಡಿಯಲ್ಲಿ ಒಂದು ರಾಜ್ಯ ಸರ್ಕಾರವು ಮಂಜೂರು ಮಾಡಿದ ಖಾಯಂ ಅಥವಾ ತಾತ್ಕಾಲಿಕ ನಿರ್ಬಂಧಿತ ಪ್ರಮಾಣಪತ್ರವನ್ನು ಹೊಂದಿರುವ ಒಬ್ಬ ವ್ಯಕ್ತಿ;

(ಇ) "ಸಂಸ್ಥೆ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಭಾರತದ ಚಾರ್ಟರ್ಡ್ ಅಕೌಂಟೆಂಟರ ಸಂಸ್ಥೆ;

(ಎಫ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ವಿನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) "ರಿಜಿಸ್ಟರ್" ಎಂದರೆ ಈ ಅಧಿನಿಯಮದ ಅಡಿಯಲ್ಲಿ ಇಟ್ಟುಕೊಂಡು ಬರಲಾದ ಸದಸ್ಯರ ರಿಜಿಸ್ಟರ್;

(ಹೆಚ್) "ನೋಂದಾಯಿತ ಅಕೌಂಟೆಂಟ್" ಎಂದರೆ ಲೆಕ್ಕಪರಿಶೋಧಕರ ಪ್ರಮಾಣಪತ್ರಗಳ ನಿಯಮಗಳು, 1932ರ ಅಡಿಯಲ್ಲಿ ಕೇಂದ್ರ ಸರ್ಕಾರವು ಇಟ್ಟುಕೊಂಡು ಬಂದಿರುವ ಅಕೌಂಟೆಂಟರ ರಿಜಿಸ್ಟರಿನಲ್ಲಿ ಹೆಸರು ಸೇರಿರುವ ಯಾರೇ ವ್ಯಕ್ತಿ;

(ಐ) "ವರ್ಷ" ಎಂದರೆ, ಯಾವುದೇ ವರ್ಷದ ಏಪ್ರಿಲ್ 1 ರಂದು ಪ್ರಾರಂಭವಾಗಿ ಮುಂದಿನ ವರ್ಷದ ಮಾರ್ಚ್ 31 ರಂದು ಮುಕ್ತಾಯವಾಗುವ ಅವಧಿ.

(2) ಸಂಸ್ಥೆಯ ಸದಸ್ಯನೊಬ್ಬನು ವೈಯುಕ್ತಿಕವಾಗಿ ಅಥವಾ ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟರ ಜೊತೆ ಪಾಲುಗಾರಿಕೆಯಲ್ಲಿ, ತಾನು ಪಡೆದ ಅಥವಾ ಪಡೆಯಬೇಕಾದ ಸಂಭಾವನೆಯ ಸಲುವಾಗಿ,-

(i) ಅಕೌಂಟೆನ್ಸಿ ವೃತ್ತಿಯಲ್ಲಿ ತನ್ನನ್ನು ತೊಡಗಿಸಿಕೊಂಡರೆ; ಅಥವಾ

(ii) ಹಣಕಾಸು ವಹಿವಾಟುಗಳ, ಪುಸ್ತಕಗಳ, ಲೆಕ್ಕಗಳ ಅಥವಾ ದಾಖಲೆಗಳ ಲೆಕ್ಕಪರಿಶೋಧನೆ ಅಥವಾ ಪರಿಶೀಲನೆ ಅಥವಾ ಹಣಕಾಸು ಲೆಕ್ಕಪತ್ರಗಳ ಹಾಗೂ ಅದಕ್ಕೆ ಸಂಬಂಧಪಟ್ಟ ವಿವರಣ ಪತ್ರಗಳನ್ನು ಸಿದ್ಧಪಡಿಸುವುದು, ಪರಿಶೀಲಿಸುವುದು ಅಥವಾ ಪ್ರಮಾಣೀಕರಿಸುವುದು– ಇವುಗಳನ್ನೊಳಗೊಂಡ ಸೇವೆಗಳನ್ನು ಮಾಡುವುದಾಗಿ ಹೇಳಿದರೆ ಅಥವಾ ಮಾಡಿದರೆ ಅಥವಾ ತಾನೊಬ್ಬ ಅಕೌಂಟೆಂಟ್‌ನೆಂದು ಸಾರ್ವಜನಿಕರಿಗೆ ತೋರಿಸಿಕೊಂಡರೆ; ಅಥವಾ

(iii) ಲೆಕ್ಕಪತ್ರ ಕಾರ್ಯವಿಧಾನಕ್ಕೆ ಸಂಬಂಧಪಟ್ಟ ತತ್ವಗಳು ಅಥವಾ ವಿವರಗಳನ್ನು ಒಳಗೊಂಡ ವಿಷಯಗಳಲ್ಲಿ ಅಥವಾ ಅವುಗಳ ಬಗ್ಗೆ ಅಥವಾ ಹಣಕಾಸು ಸಂಗತಿಗಳ ಅಥವಾ ಮಾಹಿತಿಗಳ ದಾಖಲಾತಿ, ಮಂಡನೆ ಅಥವಾ ಪ್ರಮಾಣೀಕರಣದ ಬಗ್ಗೆ ವೃತ್ತಿ ಸಂಬಂಧವಾದ ಸೇವೆಗಳನ್ನು ಅಥವಾ ಸಹಾಯವನ್ನು ನೀಡಿದರೆ; ಅಥವಾ

(iv) ಪರಿಷತ್ತಿನ ಅಭಿಪ್ರಾಯದಲ್ಲಿ ಒಬ್ಬ ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟನು ಸಲ್ಲಿಸುವಂಥ ಅಥವಾ ಸಲ್ಲಿಸಬಹುದಾದಂಥ ಇತರ ಸೇವೆಗಳನ್ನು ಸಲ್ಲಿಸಿದರೆ

–ಆತನನ್ನು "ವೃತ್ತಿನಿರತ" ನಾಗಿರುವನೆಂದು ಭಾವಿಸತಕ್ಕದ್ದು ಮತ್ತು "ವೃತ್ತಿನಿರತನಾಗಿರುವುದು" ಎಂಬ ಪದಗಳನ್ನು ಅವುಗಳ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ ತದನುಸಾರವಾಗಿ ಅರ್ಥೈಸತಕ್ಕದ್ದು.

**ವಿವರಣೆ.–** ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಅಂಥ ಚಾರ್ಟರ್ಡ್ ಅಕೌಂಟೆಂಟರುಗಳ ಒಂದು ಫರ್ಮಿನಲ್ಲಿ ಸಂಬಳ ಪಡೆಯುವ ಒಬ್ಬ ನೌಕರನಾಗಿರುವ ಒಬ್ಬ ಸಹಸದಸ್ಯನು ಅಥವಾ ಸಂಸ್ಥೆಯ ಫೆಲೋಸದಸ್ಯನು, ಹಾಗೆ ನಿಯೋಜಿತನಾಗಿದ್ದಾಗ್ಯೂ, ನಿಯಮಾವಳಿಗೊಳಪಟ್ಟ ಗುಮಾಸ್ತರ ತರಬೇತಿಯ ಪರಿಮಿತ ಉದ್ದೇಶಕ್ಕಾಗಿ ವೃತ್ತಿನಿರತನಾಗಿರುವವನು ಎಂದು ಭಾವಿಸತಕ್ಕದ್ದು.

## ಅಧ್ಯಾಯ–II

## ಭಾರತದ ಚಾರ್ಟರ್ಡ್ ಅಕೌಂಟೆಂಟರ ಸಂಸ್ಥೆ

**3. ಸಂಸ್ಥೆಯ ನಿಗಮನ.–** (1) ಈ ಅಧಿನಿಯಮದ ಪ್ರಾರಂಭದಲ್ಲಿ ರಿಜಿಸ್ಟರಿನಲ್ಲಿ ಹೆಸರು ಸೇರಿಸಲಾಗಿರುವ ಎಲ್ಲ ವ್ಯಕ್ತಿಗಳನ್ನು ಮತ್ತು ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ರಿಜಿಸ್ಟರಿನಲ್ಲಿ ಇನ್ನು ಮುಂದೆ ಹೆಸರು ಸೇರಿಸಬಹುದಾದ ಎಲ್ಲ ವ್ಯಕ್ತಿಗಳನ್ನು ಸದರಿ ರಿಜಿಸ್ಟರಿನಲ್ಲಿ ಅವರ ಹೆಸರುಗಳು ಮುಂದುವರೆಯುವವರೆಗೆ ಭಾರತದ ಚಾರ್ಟರ್ಡ್ ಅಕೌಂಟೆಂಟರ ಸಂಸ್ಥೆ ಎಂಬ ಹೆಸರಿನಲ್ಲಿ ಒಂದು ನಿಗಮಿತ ನಿಕಾಯವನ್ನಾಗಿ ಈ ಮೂಲಕ ರಚಿಸಲಾಗಿದೆ ಮತ್ತು ಅಂಥ ಎಲ್ಲ ವ್ಯಕ್ತಿಗಳನ್ನು ಆ ಸಂಸ್ಥೆಯ ಸದಸ್ಯರೆಂದು ಕರೆಯತಕ್ಕದ್ದು.

(2) ಸಂಸ್ಥೆಯು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ಚರ ಹಾಗೂ ಸ್ಥಿರ ಇವೆರಡೂ ಸ್ವತ್ತುಗಳನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೇಮಾಡುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಅದರ ಹೆಸರಿನಲ್ಲಿ ದಾವೆ ಹೂಡತಕ್ಕದ್ದು ಅಥವಾ ದಾವೆಗೆ ಗುರಿಯಾಗತಕ್ಕದ್ದು.

**4. ರಿಜಿಸ್ಟರಿನಲ್ಲಿ ಹೆಸರುಗಳ ನಮೂದು.–**(1) ಈ ಮುಂದಿನ ವ್ಯಕ್ತಿಗಳ ಪೈಕಿ, ಯಾರೇ ವ್ಯಕ್ತಿಯು ರಿಜಿಸ್ಟರಿನಲ್ಲಿ ತನ್ನ ಹೆಸರು ನಮೂದುಗೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು, ಎಂದರೆ:–

(i) ಈ ಅಧಿನಿಯಮದ ಪ್ರಾರಂಭದಲ್ಲಿ ಒಬ್ಬ ನೋಂದಾಯಿತ ಅಕೌಂಟೆಂಟ್‌ನಾಗಿರುವ ಅಥವಾ ನಿರ್ಬಂಧಿತ ಪ್ರಮಾಣಪತ್ರ ಧಾರಕನಾಗಿರುವ ಯಾರೇ ವ್ಯಕ್ತಿ;

(ii) ಸಂಸ್ಥೆಯ ಸದಸ್ಯರಿಗಾಗಿ ನಿಯಮಿಸಬಹುದಾದಂಥ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಮತ್ತು ತರಬೇತಿ ಪೂರ್ಣಗೊಳಿಸಿರುವ ಯಾರೇ ವ್ಯಕ್ತಿ;

(iii) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಕೌಂಟೆನ್ಸಿಯಲ್ಲಿ ಸರ್ಕಾರದ ಡಿಪ್ಲೊಮಾ ಪರೀಕ್ಷೆಯಲ್ಲಿ ಅಥವಾ ಅಕೌಂಟೆನ್ಸಿಯಲ್ಲಿ ಸರ್ಕಾರದ ಡಿಪ್ಲೊಮಾ ನೀಡಿಕೆಗಾಗಿ ನಿಯಮಗಳ ಮೂಲಕ ಅದಕ್ಕೆ ಸಮನಾದುದೆಂದು ಮನ್ನಣೆ ಪಡೆದ ಯಾವುದೇ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ ಯಾರೇ ವ್ಯಕ್ತಿಯು ಮತ್ತು ಲೆಕ್ಕ ಪರಿಶೋಧಕರ ಪ್ರಮಾಣಪತ್ರಗಳ ನಿಯಮಗಳು, 1932ರ ಅಡಿಯಲ್ಲಿ ಅಕೌಂಟೆಂಟ್‌ನಾಗಿ ನೋಂದಾಯಿತನಾಗಲು ವಿಧ್ಯುಕ್ತವಾಗಿ ಅರ್ಹನಲ್ಲದಿದ್ದರೂ ಈ ಸಂಬಂಧವಾಗಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳನ್ನು ಪೂರೈಸಿರುವ ಯಾರೇ ವ್ಯಕ್ತಿ;

(iv) ಈ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ 'ಬಿ' ಭಾಗದ ರಾಜ್ಯದಲ್ಲಿ ಅಕೌಂಟೆನ್ಸಿ ವೃತ್ತಿಯಲ್ಲಿ ನಿರತನಾಗಿರುವ ಮತ್ತು ಲೆಕ್ಕಪರಿಶೋಧಕರ ಪ್ರಮಾಣಪತ್ರಗಳ ನಿಯಮಗಳು, 1932 ರ ಅಡಿಯಲ್ಲಿ ಒಬ್ಬ ಅಕೌಂಟೆಂಟನಾಗಿ ನೋಂದಾಯಿತನಾಗಲು ಅಗತ್ಯ ಅರ್ಹತೆಗಳನ್ನು ಹೊಂದಿರದಿದ್ದರೂ, ಈ ಸಂಬಂಧವಾಗಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳನ್ನು ಪೂರೈಸಿರುವ ಯಾರೇ ವ್ಯಕ್ತಿ;

(v) ಸಂಸ್ಥೆಯ ಸದಸ್ಯರಿಗಾಗಿ ನಿಯಮಿಸಿರುವ ಪರೀಕ್ಷೆಗೆ ಮತ್ತು ತರಬೇತಿಗೆ ಸಮವಾದುದೆಂದು ಕೇಂದ್ರ ಸರ್ಕಾರ ಅಥವಾ ಪರಿಷತ್ತು ಮನ್ನಣೆ ನೀಡಿರುವಂಥ ಭಾರತದ ಹೊರಗಿನ ಇತರ ಪರೀಕ್ಷೆಯನ್ನು ತೇರ್ಗಡೆಯಾಗಿರುವ ಮತ್ತು ಅಂಥ ಇತರ ತರಬೇತಿಯನ್ನು ಪೂರ್ಣಗೊಳಿಸಿರುವ ಯಾರೇ ವ್ಯಕ್ತಿ:

ಪರಂತು, ಭಾರತದಲ್ಲಿ ಖಾಯಂ ಆಗಿ ನೆಲೆಸಿರದ ಯಾರೇ ವ್ಯಕ್ತಿಯ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಅಥವಾ ಸಂದರ್ಭಾನುಸಾರ ಪರಿಷತ್ತು ತಾನು ಯುಕ್ತವೆಂದು ಭಾವಿಸಬಹುದಾದಂಥ ಮತ್ತಷ್ಟು ಷರತ್ತುಗಳನ್ನು ವಿಧಿಸಬಹುದು;

(vi) ಈ ಅಧಿನಿಯಮದ ಪ್ರಾರಂಭದಲ್ಲಿ ಯಾವುದೇ ವಿದೇಶೀ ಪರೀಕ್ಷೆಗಾಗಿ ಅಧ್ಯಯನ ಮಾಡುತ್ತಿರುವ ಮತ್ತು ಅದೇ ವೇಳೆಯಲ್ಲಿ ಭಾರತದಲ್ಲಾಗಲಿ ಅಥವಾ ಹೊರಗಡೆಯಾಗಲಿ ತರಬೇತಿ ಪಡೆಯುತ್ತಿರುವ ಅಥವಾ ಅಂಥ ವಿದೇಶೀ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದು, ಈ ಅಧಿನಿಯಮದ ಪ್ರಾರಂಭದಲ್ಲಿ ಭಾರತದಲ್ಲಾಗಲಿ ಅಥವಾ ಹೊರಗಡೆಯಾಗಲಿ ತರಬೇತಿ ಪಡೆಯುತ್ತಿರುವ ಮತ್ತು ಭಾರತದ ಅಧಿವಾಸಿಯಾಗಿರುವ ಯಾರೇ ವ್ಯಕ್ತಿ:

ಪರಂತು, ಲೆಕ್ಕಪರಿಶೋಧಕರ ಪ್ರಮಾಣಪತ್ರಗಳ ನಿಯಮಗಳು, 1932ರ ಅಡಿಯಲ್ಲಿ ಒಬ್ಬ ಅಕೌಂಟೆಂಟ್‌ನಾಗಿ ನೋಂದಾಯಿಸಿಕೊಳ್ಳುವ ಹಕ್ಕನ್ನು ನೀಡುವ ಉದ್ದೇಶಕ್ಕಾಗಿ ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಯಾವುದೇ ಅಂಥ ಪರೀಕ್ಷೆಯು ಅಥವಾ ತರಬೇತಿಯು ಮನ್ನಣೆ ಪಡೆದಿದ್ದಿರಬೇಕು ಮತ್ತು ಪರಂತು, ಅಂಥ ವ್ಯಕ್ತಿಯು ಈ ಅಧಿನಿಯಮವು ಪ್ರಾರಂಭವಾದ ತರುವಾಯ ಐದು ವರ್ಷಗಳೊಳಗೆ ಅಂಥ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು ಅಥವಾ ತರಬೇತಿಯನ್ನು ಪೂರ್ಣಗೊಳಿಸಿರಬೇಕು.

(2) (1)ನೇ ಉಪಪ್ರಕರಣದ (i)ನೇ ಖಂಡದಲ್ಲಿ ನಮೂದಿಸಿರುವ ವರ್ಗಕ್ಕೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯು, ಯಾವುದೇ ಪ್ರವೇಶ ಶುಲ್ಕ ಪಾವತಿ ಮಾಡದೆ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದು ಮಾಡಿಸಿಕೊಳ್ಳತಕ್ಕದ್ದು.

(3) (1)ನೇ ಉಪಪ್ರಕರಣದ (ii), (iii), (iv), (v) ಮತ್ತು (vi) ನೇ ಖಂಡಗಳಲ್ಲಿ ನಮೂದಿಸಿರುವ ಯಾವುವೇ ವರ್ಗಗಳಿಗೆ ಸೇರಿದ ಪ್ರತಿಯೊಬ್ಬ ವ್ಯಕ್ತಿಯು, ನಿಯಮಿಸಿದ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿ ಅದಕ್ಕೆ ಮಂಜೂರಾತಿ ದೊರೆತ ಮೇಲೆ ಮತ್ತು ಯಾವುದೇ ಸಂದರ್ಭದಲ್ಲೂ ಮೂರುನೂರು ರೂಪಾಯಿ ಮೀರದಂತೆ ನಿಯಮಿಸಲಾದ ಫೀಜನ್ನು ಸಂದಾಯ ಮಾಡಿದ ತರುವಾಯ ತನ್ನ ಹೆಸರನ್ನು ರಿಜಿಸ್ಟರಿನಲ್ಲಿ ನಮೂದು ಮಾಡಿಸಿಕೊಳ್ಳತಕ್ಕದ್ದು.

(4) ಕೇಂದ್ರ ಸರ್ಕಾರವು, (1)ನೇ ಉಪಪ್ರಕರಣದ (i)ನೇ ಖಂಡದಲ್ಲಿ ನಮೂದಿಸಿರುವ ವರ್ಗಕ್ಕೆ ಸೇರಿದ ಎಲ್ಲ ವ್ಯಕ್ತಿಗಳ ಹೆಸರುಗಳನ್ನು ರಿಜಿಸ್ಟರಿನಲ್ಲಿ ನಮೂದುಮಾಡುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕದ್ದು.

**5. ಫೆಲೋ ಸದಸ್ಯರು ಮತ್ತು ಸಹಸದಸ್ಯರು.**–(1) ಸಂಸ್ಥೆಯ ಸದಸ್ಯರನ್ನು ಅನುಕ್ರಮವಾಗಿ ಸಹಸದಸ್ಯರು ಮತ್ತು ಫೆಲೋ ಸದಸ್ಯರು ಎಂಬುದಾಗಿ ಎರಡು ವರ್ಗಗಳಾಗಿ ವಿಂಗಡಿಸತಕ್ಕದ್ದು.

(2) ಯಾರೇ ವ್ಯಕ್ತಿಯು, ರಿಜಿಸ್ಟರಿನಲ್ಲಿ ತನ್ನ ಹೆಸರು ನಮೂದಿತವಾದ ಮೇಲೆ ಸಂಸ್ಥೆಯ ಸಹ ಸದಸ್ಯನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ತಾನು ಚಾರ್ಟರ್ಡ್ ಅಕೌಂಟೆಂಟರ ಸಂಸ್ಥೆಯ ಒಬ್ಬ ಸಹ ಸದಸ್ಯನೆಂಬುದನ್ನು ಸೂಚಿಸಲು ತನ್ನ ಹೆಸರಿನ ಮುಂದೆ **ಎ.ಸಿ.ಎ.** ಎಂಬ ಅಕ್ಷರಗಳನ್ನು ಬಳಸಲು ಹಕ್ಕು ಹೊಂದಿರತಕ್ಕದ್ದು.

(3) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆಯಾಗಲಿ ಅಥವಾ ತರುವಾಯವಾಗಲಿ, ಅಥವಾ ಈ ಅಧಿನಿಯಮದ ಪ್ರಾರಂಭದ ಭಾಗಶಃ ಮುಂಚೆಯಾಗಲಿ ಮತ್ತು ಭಾಗಶಃ ತರುವಾಯವಾಗಲಿ, ಕನಿಷ್ಠ ಐದು ವರ್ಷಗಳವರೆಗೆ ಭಾರತದಲ್ಲಿ ನಿರಂತರ ವೃತ್ತಿ ನಿರತನಾಗಿರುವ ಒಬ್ಬ ಸದಸ್ಯನು ಮತ್ತು ಸಹ ಸದಸ್ಯನಾಗಿರುವ, ಐದು ವರ್ಷಗಳಿಗೆ ಕಡಿಮೆ ಇಲ್ಲದಂಥ ನಿರಂತರ ಅವಧಿಯವರೆಗೆ ಸೇವೆ ಸಲ್ಲಿಸಿರುವ ಮತ್ತು ಚಾರ್ಟರ್ಡ್ ಅಕೌಂಟೆಂಟ್ ಆಗಿ ಐದು ವರ್ಷಗಳ ಅವಧಿಯವರೆಗೆ ನಿರಂತರ ಸೇವೆ ಸಲ್ಲಿಸಿದವರು ಸಾಮಾನ್ಯವಾಗಿ ಗಳಿಸುವ ಅನುಭವಕ್ಕೆ

ಸಮನಾದ ಅನುಭವವನ್ನು ಗಳಿಸಿದ್ದಾನೆಂಬುದನ್ನು ಖಚಿತಪಡಿಸಿಕೊಳ್ಳುವ ದೃಷ್ಟಿಯಿಂದ ಪರಿಷತ್ತು ನಿಗದಿಪಡಿಸಬಹುದಾದಂಥ ಅರ್ಹತೆಗಳನ್ನು ಹೊಂದಿರುವ ಒಬ್ಬ ಸದಸ್ಯನು ಯಾವುದೇ ಸಂದರ್ಭದಲ್ಲಿ ಎರಡುನೂರು ರೂಪಾಯಿಗೆ ಮೀರತಕ್ಕದ್ದಲ್ಲದ ನಿಯಮಿಸಲಾದ ಪ್ರವೇಶ ಫೀಜನ್ನು ಸಂದಾಯ ಮಾಡಿ ನಿಯಮಿಸಿದ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸಿ ಅದಕ್ಕೆ ಮಂಜೂರಾತಿ ದೊರೆತ ಮೇಲೆ ಸಂಸ್ಥೆಯ ಫೆಲೋ ಸದಸ್ಯನಾಗಿ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದು ಮಾಡಿಸಿಕೊಳ್ಳತಕ್ಕದ್ದು ಮತ್ತು ತಾನು ಚಾರ್ಟರ್ಡ್ ಅಕೌಂಟೆಂಟರ ಸಂಸ್ಥೆಯ ಫೆಲೋ ಸದಸ್ಯನೆಂಬುದನ್ನು ಸೂಚಿಸಲು ತನ್ನ ಹೆಸರಿನ ಮುಂದೆ **ಎಫ್**.ಸಿ.ಎ. ಎಂಬ ಅಕ್ಷರಗಳನ್ನು ಬಳಸಲು ಅವನು ಹಕ್ಕುಳ್ಳವನಾಗಿರತಕ್ಕದ್ದು.

**6. ವೃತ್ತಿ ಪ್ರಮಾಣಪತ್ರ.–** (1) ಸಂಸ್ಥೆಯ ಯಾರೇ ಸದಸ್ಯನು ಪರಿಷತ್ತಿನಿಂದ ವೃತ್ತಿ ಪ್ರಮಾಣಪತ್ರವನ್ನು ಪಡೆದಿರುವ ಹೊರತು ಭಾರತದಲ್ಲಾಗಲಿ ಅಥವಾ ಬೇರೆ ಕಡೆಯಲ್ಲಾಗಲಿ ವೃತ್ತಿ ನಡೆಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಅಂಥ ಪ್ರತಿಯೊಬ್ಬ ಸದಸ್ಯನು ಅವನ ಪ್ರಮಾಣಪತ್ರಕ್ಕಾಗಿ ನಿಯಮಿಸಬಹುದಾದಂಥ ವಾರ್ಷಿಕ ಫೀಜನ್ನು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಫೀಜನ್ನು ಪ್ರತಿವರ್ಷವೂ ಏಪ್ರಿಲ್ 1ನೇ ದಿನಾಂಕದಂದು ಅಥವಾ ಅದಕ್ಕೂ ಮುಂಚೆ ಸಂದಾಯಮಾಡತಕ್ಕದ್ದು.

**7. ಸದಸ್ಯರು ಚಾರ್ಟರ್ಡ್ ಅಕೌಂಟೆಂಟ್ ಎಂಬುದಾಗಿ ಕರೆಸಿಕೊಳ್ಳುವುದು.–** ಸಂಸ್ಥೆಯ ಪ್ರತಿಯೊಬ್ಬ ವೃತ್ತಿ ನಿರತ ಸದಸ್ಯನು ಚಾರ್ಟರ್ಡ್ ಅಕೌಂಟೆಂಟ್ ಎಂಬ ಪದನಾಮವನ್ನು ಬಳಸತಕ್ಕದ್ದು ಮತ್ತು ಇತರೆ ಯಾರೇ ಸದಸ್ಯನು ಆ ಪದನಾಮವನ್ನು ಬಳಸಬಹುದು ಮತ್ತು ಅಂಥ ಪದನಾಮವನ್ನು ಬಳಸುವ ಯಾರೇ ಸದಸ್ಯನು ಅದಕ್ಕೆ ಹೆಚ್ಚಿಗೆಯಾಗಲೀ ಅಥವಾ ಅದಕ್ಕೆ ಬದಲಾಗಿ ಯಾವುದೇ ಇತರೆ ವಿವರಣೆಯನ್ನು ಬಳಸತಕ್ಕದ್ದಲ್ಲ:

ಪರಂತು, ಯಾರೇ ಅಂಥ ವ್ಯಕ್ತಿಯು, ಪರಿಷತ್ತು ಈ ಸಂಬಂಧದಲ್ಲಿ ಮನ್ನಣೆ ನೀಡಬಹುದಾದಂಥ ಭಾರತದ ಅಥವಾ ಬೇರೆಡೆಯ ಇತರ ಅಕೌಂಟೆನ್ಸಿ ಸಂಸ್ಥೆಯ ಸದಸ್ಯತ್ವವನ್ನು ಹೊಂದಿದ್ದಾನೆಂದು ಸೂಚಿಸಲು ಹಕ್ಕುಳ್ಳವನಾಗಿದ್ದರೆ ಮತ್ತು ಇತರೆ ಅರ್ಹತೆಯನ್ನು ಹೊಂದಿದ್ದರೆ ತನ್ನ ಹೆಸರಿಗೆ ಯಾವುದೇ ಇತರ ವಿವರಣೆಯನ್ನು ಅಥವಾ ಅಕ್ಷರಗಳನ್ನು ಸೇರಿಸಿಕೊಳ್ಳುವುದನ್ನು ಅಥವಾ ಒಂದು ಫರ್ಮಿನ ಎಲ್ಲ ಪಾಲುದಾರರು ಸಂಸ್ಥೆಯ ಸದಸ್ಯರಾಗಿದ್ದು ವೃತ್ತಿನಿರತರಾಗಿದ್ದರೆ ಮತ್ತು ಆ ಫರ್ಮಿನ ಹೆಸರನ್ನು ಚಾರ್ಟರ್ಡ್ ಅಕೌಂಟೆಂಟ್‌ರ ಫರ್ಮು ಎಂದು ಕರೆಸಿಕೊಳ್ಳುವುದನ್ನು ಈ ಪ್ರಕರಣದಲ್ಲಿರುವುದಾವುದೂ ಪ್ರತಿಷೇಧಿಸತಕ್ಕದ್ದಲ್ಲ.

**8. ಅಸಮರ್ಥತೆಗಳು.–** 4ನೇ ಪ್ರಕರಣದಲ್ಲಿ ಏನೇ ಇದ್ದರೂ, ಒಬ್ಬ ವ್ಯಕ್ತಿಯು,–

(i) ತನ್ನ ಹೆಸರನ್ನು ರಿಜಿಸ್ಟರಿನಲ್ಲಿ ನಮೂದಿಸುವುದಕ್ಕಾಗಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಅವನ ವಯಸ್ಸು ಇಪ್ಪತ್ತೊಂದು ವರ್ಷ ಆಗಿರದಿದ್ದರೆ; ಅಥವಾ

(ii) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ನ್ಯಾಯ ನಿರ್ಣೀತನಾಗಿದ್ದರೆ; ಅಥವಾ

(iii) ಅವಿಮುಕ್ತ ದಿವಾಳಿಯಾಗಿದ್ದರೆ; ಅಥವಾ

(iv) ಅವಿಮುಕ್ತ ದಿವಾಳಿಯಾಗಿದ್ದು, ಅವನ ದಿವಾಳಿತನವು ಯಾವುದೇ ದುರ್ನಡತೆಯಿಂದ ಆದುದಲ್ಲ, ಆದರೆ, ಅವನ ದುರಾದೃಷ್ಟದಿಂದ ಉಂಟಾದುದೆಂದು ನ್ಯಾಯಾಲಯದಿಂದ ದೃಢೀಕರಣ ಪ್ರಮಾಣಪತ್ರ ಪಡೆದಿಲ್ಲದಿದ್ದರೆ; ಅಥವಾ

(v) ನೈತಿಕ ಅಧಃಪತನವನ್ನೊಳಗೊಂಡಿದ್ದು, ಗಡಿಪಾರು ಅಥವಾ ಕಾರಾವಾಸ ಶಿಕ್ಷೆಯಿಂದ ದಂಡನೀಯವಾದ ಒಂದು ಅಪರಾಧಕ್ಕಾಗಿ ಅಥವಾ ಅವನ ವೃತ್ತಿ ಸಾಮರ್ಥ್ಯದಲ್ಲಿ ಎಸಗಿದ ತಾಂತ್ರಿಕ ಸ್ವರೂಪದ್ದಲ್ಲದ ಒಂದು ಅಪರಾಧಕ್ಕಾಗಿ ಹಾಗೆ ಎಸಗಿದ ಅಪರಾಧದ ಸಂಬಂಧದಲ್ಲಿ ಕ್ಷಮಾದಾನ ದೊರೆತಿದ್ದ ಹೊರತು ಅಥವಾ ಈ ಸಂಬಂಧವಾಗಿ ಅವನು ಸಲ್ಲಿಸಿದ ಅರ್ಜಿಯ ಮೇಲೆ ಕೇಂದ್ರ ಸರ್ಕಾರವು ಲಿಖಿತ ಆದೇಶದ ಮೂಲಕ ಅಸಮರ್ಥತೆಯನ್ನು ತೆಗೆದುಹಾಕಿದ್ದ ಹೊರತು, ಭಾರತದ ಹೊರಗಡೆಯ ಅಥವಾ ಭಾರತದೊಳಗಿನ ಸಕ್ಷಮ ನ್ಯಾಯಾಲಯದಿಂದ ಅಪರಾಧಿಯೆಂದು ನಿರ್ಣೀತನಾಗಿದ್ದರೆ; ಅಥವಾ

(vi) ವೃತ್ತಿ ಸಂಬಂಧದ ಅಥವಾ ಇತರೆ ದುರ್ನಡತೆಯ ತಪ್ಪಿತಸ್ಥನಾಗಿದ್ದಾನೆಂದು ವಿಚಾರಣೆಯ ತರುವಾಯ ಕಂಡುಬಂದ ಮೇಲೆ ಅವನನ್ನು ಸಂಸ್ಥೆಯ ಸದಸ್ಯತ್ವದಿಂದ ತೆಗೆದುಹಾಕಿದ್ದರೆ

– ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಅಥವಾ ಹೊಂದಿರಲು ಹಕ್ಕುಳ್ಳವನಾಗತಕ್ಕದ್ದಲ್ಲ:

ಪರಂತು, ಒಂದು ನಿರ್ದಿಷ್ಟ ಅವಧಿಗಾಗಿ ಸದಸ್ಯತ್ವದಿಂದ ತೆಗೆದುಹಾಕಲಾದಂಥ ಒಬ್ಬ ವ್ಯಕ್ತಿಯು ಅಂಥ ಅವಧಿಯು ಮುಕ್ತಾಯವಾಗುವ ತನಕ ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸಿಕೊಳ್ಳಲು ಹಕ್ಕು ಹೊಂದಿರತಕ್ಕದ್ದಲ್ಲ.

## ಅಧ್ಯಾಯ – III

## ಸಂಸ್ಥೆಯ ಪರಿಷತ್ತು

**9. ಸಂಸ್ಥೆಯ ಪರಿಷತ್ತಿನ ರಚನೆ.–**(1) ಸಂಸ್ಥೆಯ ವ್ಯವಹಾರಗಳ ವ್ಯವಸ್ಥಾಪನೆಯ ಸಲುವಾಗಿ ಮತ್ತು ಈ ಅಧಿನಿಯಮದ ಮೇರೆಗೆ ಅದಕ್ಕೆ ವಹಿಸಿದ ಪ್ರಕಾರ್ಯಗಳನ್ನು ನಿರ್ವಹಿಸುವ ಸಲುವಾಗಿ ಒಂದು ಪರಿಷತ್ತು ಇರತಕ್ಕದ್ದು.

(2) ಪರಿಷತ್ತು ಈ ಕೆಳಕಂಡ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು, ಈ ಸಂಬಂಧದಲ್ಲಿ ನಿರ್ದಿಷ್ಟ ಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ಆಯ್ಕೆ ಮಾಡಿದ ಸಂಸ್ಥೆಯ ಫೆಲೋ ಸದಸ್ಯರ ಪೈಕಿಯಿಂದ ಸಂಸ್ಥೆಯ ಸದಸ್ಯರು ಚುನಾಯಿಸಿದ ಇಪ್ಪತ್ನಾಲ್ಕಕ್ಕೆ ಮೀರದಷ್ಟು ವ್ಯಕ್ತಿಗಳು; ಮತ್ತು

(ಬಿ) ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಿದ ಆರು ವ್ಯಕ್ತಿಗಳು.

**10. ಪರಿಷತ್ತಿನ ಚುನಾವಣಾ ವಿಧಾನ.–**(1) 9ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿನ ಚುನಾವಣೆಗಳನ್ನು ನಿಯಮಿಸಿದ ರೀತಿಯಲ್ಲಿ ನಡೆಸತಕ್ಕದ್ದು.

(2) ಅಂಥ ಯಾವುದೇ ಚುನಾವಣೆಯ ಸಂಬಂಧದಲ್ಲಿ ಯಾವುದೇ ವಿವಾದ ಉದ್ಭವಿಸಿದಲ್ಲಿ, ಆ ವಿಷಯವನ್ನು ಈ ಸಂಬಂಧವಾಗಿ ಕೇಂದ್ರ ಸರ್ಕಾರವು ನೇಮಕ ಮಾಡಿರುವ ನ್ಯಾಯಾಧಿಕರಣಕ್ಕೆ ಪರಿಷತ್ತಿನ ಮೂಲಕ ಉಲ್ಲೇಖಿಸತಕ್ಕದ್ದು ಮತ್ತು ಆ ಬಗ್ಗೆ ಅಂಥ ನ್ಯಾಯಾಧಿಕರಣದ ತೀರ್ಮಾನವೇ ಅಂತಿಮವಾಗಿರತಕ್ಕದ್ದು:

ಪರಂತು, ಚುನಾವಣಾ ಫಲಿತಾಂಶ ಘೋಷಣೆಯಾದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ, ಬಾಧಿತನಾದ ವ್ಯಕ್ತಿಯು ಪರಿಷತ್ತಿಗೆ ಅರ್ಜಿ ಸಲ್ಲಿಸಿದ ಹೊರತು ಅಂಥ ಉಲ್ಲೇಖಗಳನ್ನು ಮಾಡತಕ್ಕದ್ದಲ್ಲ.

(3) ನ್ಯಾಯಾಧಿಕರಣದ ವೆಚ್ಚಗಳನ್ನು ಪರಿಷತ್ತು ಭರಿಸತಕ್ಕದ್ದು.

**11. ಚುನಾವಣೆ ನಡೆಸಲು ಅಥವಾ ನಾಮನಿರ್ದೇಶನ ಮಾಡಲು ತಪ್ಪಿದಲ್ಲಿ ನಾಮನಿರ್ದೇಶನ.–** 9ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಮತ್ತು ಆ ಪ್ರಕರಣದ ಮೇರೆಗೆ ಪರಿಷತ್ತಿನ ಸದಸ್ಯರನ್ನು ಚುನಾಯಿಸಲು ಅಧಿಕಾರ ಪಡೆದ ವ್ಯಕ್ತಿಗಳ ಯಾವುದೇ ನಿಕಾಯವು ಯಾರೇ ಸದಸ್ಯನನ್ನು ಚುನಾಯಿಸಲು ತಪ್ಪಿದರೆ, ಕೇಂದ್ರ ಸರ್ಕಾರವು ಅಂಥ ಖಾಲಿಸ್ಥಾನವನ್ನು ತುಂಬಲು ಯುಕ್ತವಾಗಿ ಅರ್ಹನಾದ ಒಬ್ಬ ವ್ಯಕ್ತಿಯನ್ನು ನಾಮನಿರ್ದೇಶನ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶಿತನಾದ ಯಾರೇ ವ್ಯಕ್ತಿಯು ಅವನು ಕ್ರಮಬದ್ಧವಾಗಿ ಚುನಾಯಿತನಾಗಿದ್ದರೆ ಹೇಗೋ ಹಾಗೆ ಪರಿಷತ್ತಿನ ಒಬ್ಬ ಸದಸ್ಯನೆಂಬುದಾಗಿ ಭಾವಿಸತಕ್ಕದ್ದು.

**12. ಅಧ್ಯಕ್ಷ ಮತ್ತು ಉಪಾಧ್ಯಕ್ಷ.–**(1) ಪರಿಷತ್ತು ತನ್ನ ಪ್ರಥಮ ಸಭೆಯಲ್ಲಿ ತನ್ನ ಸದಸ್ಯರ ಪೈಕಿ ಇಬ್ಬರನ್ನು ಅನುಕ್ರಮವಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು ಮತ್ತು ಅಧ್ಯಕ್ಷನ ಅಥವಾ ಉಪಾಧ್ಯಕ್ಷನ ಸ್ಥಾನವು ಖಾಲಿಯಾದಾಗಲೆಲ್ಲ ಪರಿಷತ್ತು ಮತ್ತೊಬ್ಬ ವ್ಯಕ್ತಿಯನ್ನು ಅಧ್ಯಕ್ಷ ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡತಕ್ಕದ್ದು:

ಪರಂತು, ಪರಿಷತ್ತು ಮೊದಲ ಬಾರಿಗೆ ರಚನೆಯಾದ ಮೇಲೆ, ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ನಾಮನಿರ್ದೇಶನ ಮಾಡಿದ ಪರಿಷತ್ತಿನ ಒಬ್ಬ ಸದಸ್ಯನು, ಈ ಉಪಪ್ರಕರಣದ ಉಪಬಂಧಗಳ ಅಡಿಯಲ್ಲಿ ಅಧ್ಯಕ್ಷನು ಆಯ್ಕೆಯಾಗುವವರೆಗೆ ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(2) ಅಧ್ಯಕ್ಷನು ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ಪ್ರಾಧಿಕಾರಿಯಾಗಿರತಕ್ಕದ್ದು.

(3) ಅಧ್ಯಕ್ಷ ಅಥವಾ ಉಪಾಧ್ಯಕ್ಷನು ತಾನು ಆಯ್ಕೆಯಾದ ದಿನಾಂಕದಿಂದ ಒಂದು ವರ್ಷದ ಅವಧಿಗೆ, ಆದರೆ ಪರಿಷತ್ತಿನ ಒಬ್ಬ ಸದಸ್ಯನಾಗಿ ಅವನ ಪದಾವಧಿಯನ್ನು ಮೀರದ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಸಂಬಂಧಪಟ್ಟ ಸಮಯದಲ್ಲಿ ಪರಿಷತ್ತಿನ ಒಬ್ಬ ಸದಸ್ಯನಾಗಿರುವುದಕ್ಕೊಳಪಟ್ಟು ಅವನು ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದು.

(4) ಪರಿಷತ್ತಿನ ಅವಧಿಯು ಮುಕ್ತಾಯವಾದ ಮೇಲೆ ಅಂಥ ಮುಕ್ತಾಯದ ಕಾಲದಲ್ಲಿ ಪರಿಷತ್ತಿನ ಅಧ್ಯಕ್ಷನಾಗಿದ್ದವನು ಹೊಸ ಅಧ್ಯಕ್ಷನ ಆಯ್ಕೆಯಾಗುವವರೆಗೆ ಮತ್ತು ಅವನು ತನ್ನ ಕರ್ತವ್ಯಗಳನ್ನು ವಹಿಸಿಕೊಳ್ಳುವವರೆಗೆ ತನ್ನ ಪದದಲ್ಲಿ ಮುಂದುವರೆಯತಕ್ಕದ್ದು ಮತ್ತು ಅಂಥ ಆಡಳಿತಾತ್ಮಕ ಮತ್ತು ಸಂದರ್ಭಾನುಸಾರವಾಗಿ ಇತರೆ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**13. ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದು ಮತ್ತು ಆಕಸ್ಮಿಕ ಖಾಲಿಸ್ಥಾನಗಳು.–** (1) ಪರಿಷತ್ತಿನ ಯಾರೇ ಸದಸ್ಯನು ತಾನು ಸಹಿ ಮಾಡಿದ ಪತ್ರವನ್ನು ಅಧ್ಯಕ್ಷನಿಗೆ ಕಳುಹಿಸಿ ಯಾವುದೇ ಕಾಲದಲ್ಲಿ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ನೀಡಬಹುದು ಮತ್ತು ರಾಜಪತ್ರದಲ್ಲಿ ಅಂಥ ರಾಜೀನಾಮೆಯು ಅಧಿಸೂಚಿತವಾದಾಗ ಅಂಥ ಸದಸ್ಯನ ಸ್ಥಾನವು ಖಾಲಿಯಾಗತಕ್ಕದ್ದು.

(2) ಪರಿಷತ್ತಿನ ಒಬ್ಬ ಸದಸ್ಯನನ್ನು ಯಾವುದೇ ಕಾರಣವಿಲ್ಲದೆ, ನಿರಂತರವಾಗಿ ಬರುವ ಪರಿಷತ್ತಿನ ಮೂರು ಸಭೆಗಳಿಗೆ ಗೈರುಹಾಜರಾಗಿದ್ದಾನೆಂದು ಪರಿಷತ್ತು ಘೋಷಿಸಿದರೆ ಅಥವಾ ಅವನ ಹೆಸರನ್ನು ಯಾವುದೇ ಕಾರಣಕ್ಕಾಗಿ 20ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ರಿಜಿಸ್ಟರಿನಿಂದ ತೆಗೆದುಹಾಕಿದ್ದರೆ, ಅವನ ಸ್ಥಾನವು ಖಾಲಿಯಾಗಿದೆಯೆಂದು ಭಾವಿಸತಕ್ಕದ್ದು.

(3) ಪರಿಷತ್ತಿನಲ್ಲಿ ಉಂಟಾದ ಆಕಸ್ಮಿಕ ಖಾಲಿಸ್ಥಾನವನ್ನು ಸಂಬಂಧಪಟ್ಟ ಚುನಾವಣಾ ಕ್ಷೇತ್ರದಿಂದ ಹೊಸದಾಗಿ ಚುನಾವಣೆ ನಡೆಸುವ ಮೂಲಕ ಅಥವಾ ಸಂದರ್ಭಾನುಸಾರವಾಗಿ, ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಖಾಲಿಸ್ಥಾನವನ್ನು ತುಂಬಲು ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ವ್ಯಕ್ತಿಯು ಪರಿಷತ್ತು ವಿಸರ್ಜನೆಯಾಗುವವರೆಗೆ ಪದಧಾರಣ ಮಾಡತಕ್ಕದ್ದು:

ಪರಂತು, ಪರಿಷತ್ತಿನ ಅವಧಿ ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ಆರು ತಿಂಗಳೊಳಗಾಗಿ ಉಂಟಾಗುವ ಆಕಸ್ಮಿಕ ಖಾಲಿಸ್ಥಾನವನ್ನು ತುಂಬುವುದಕ್ಕೆ ಚುನಾವಣೆ ನಡೆಸತಕ್ಕದ್ದಲ್ಲ, ಆದರೆ, ಅಂಥ ಖಾಲಿಸ್ಥಾನವನ್ನು ಕೇಂದ್ರ ಸರ್ಕಾರವು ಪರಿಷತ್ತಿನ ಅಧ್ಯಕ್ಷನೊಡನೆ ಸಮಾಲೋಚಿಸಿದ ನಂತರ ನಾಮನಿರ್ದೇಶನ ಮಾಡುವ ಮೂಲಕ ತುಂಬಬಹುದು.

(4) ಪರಿಷತ್ತಿನಲ್ಲಿ ಯಾವುದೇ ಖಾಲಿಸ್ಥಾನವಿರುವುದೆಂಬ ಅಥವಾ ಪರಿಷತ್ತಿನ ರಚನೆಯಲ್ಲಿ ಯಾವುದೇ ದೋಷವಿದೆಯೆಂಬ ಕಾರಣಮಾತ್ರದಿಂದಲೇ ಪರಿಷತ್ತು ಮಾಡಿದ ಯಾವುದೇ ಕಾರ್ಯವನ್ನು ಪ್ರಶ್ನಿಸತಕ್ಕದ್ದಲ್ಲ.

**14. ಪರಿಷತ್ತಿನ ಅವಧಿ ಮತ್ತು ವಿಸರ್ಜನೆ.–** (1) ಈ ಅಧಿನಿಯಮದ ಅಡಿಯಲ್ಲಿ ರಚಿತವಾದ ಯಾವುದೇ ಪರಿಷತ್ತಿನ ಅವಧಿಯು ಅದರ ಪ್ರಥಮ ಸಭೆಯ ದಿನಾಂಕದಿಂದ ಮೂರು ವರ್ಷಗಳಾಗಿರತಕ್ಕದ್ದು ಮತ್ತು ಅವಧಿಯು ಮುಕ್ತಾಯವಾದ ನಂತರ ವಿಸರ್ಜನೆಗೊಳ್ಳತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳ ಅನುಸಾರವಾಗಿ ಹೊಸ ಪರಿಷತ್ತನ್ನು ರಚಿಸತಕ್ಕದ್ದು.

(2) ಪರಿಷತ್ತಿನ ಅವಧಿ ಮುಕ್ತಾಯವಾಗಿದ್ದಾಗ್ಯೂ, (ಇದರಲ್ಲಿ ಮುಂದೆ ಅದನ್ನು ಹಿಂದಿನ ಪರಿಷತ್ತು ಎಂದು ಉಲ್ಲೇಖಿಸಿದೆ) ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಹೊಸ ಪರಿಷತ್ತು ರಚನೆಯಾಗುವವರೆಗೆ ಹಿಂದಿನ ಪರಿಷತ್ತು ಅದರ ಪ್ರಕಾರ್ಯಗಳನ್ನು ಚಲಾಯಿಸುವುದನ್ನು ಮುಂದುವರೆಸತಕ್ಕದ್ದು ಮತ್ತು ಹೊಸ ಪರಿಷತ್ತು ರಚನೆಯಾದ ಮೇಲೆ, ಹಿಂದಿನ ಪರಿಷತ್ತು ವಿಸರ್ಜನೆಯಾಗತಕ್ಕದ್ದು.

**15. ಪರಿಷತ್ತಿನ ಪ್ರಕಾರ್ಯಗಳು.–** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಕರ್ತವ್ಯವು ಪರಿಷತ್ತಿನಲ್ಲಿ ನಿಹಿತವಾಗಿರತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಪರಿಷತ್ತಿನ ಕರ್ತವ್ಯಗಳಲ್ಲಿ ಈ ಮುಂದಿನವುಗಳು ಒಳಗೊಂಡಿರತಕ್ಕದ್ದು:–

(ಎ) ಪಟ್ಟಿಯಲ್ಲಿ ಹೆಸರನ್ನು ಸೇರಿಸುವುದಕ್ಕಾಗಿ ಅಭ್ಯರ್ಥಿಗಳನ್ನು ಪರೀಕ್ಷಿಸುವುದು ಮತ್ತು ಆ ಉದ್ದೇಶಕ್ಕಾಗಿ ಫೀಜುಗಳನ್ನು ನಿಯಮಿಸುವುದು;

(ಬಿ) ನಿಯಮಗಳಿಗೊಳಪಟ್ಟು ಅಭ್ಯಾಸಿ ಮತ್ತು ಲೆಕ್ಕ ಪರಿಶೋಧನಾ ಗುಮಾಸ್ತರ ಕಾರ್ಯನಿರತತೆ ಮತ್ತು ತರಬೇತಿಯನ್ನು ವಿನಿಯಮಿಸುವುದು;

(ಸಿ) ರಿಜಿಸ್ಟರಿನಲ್ಲಿ ನಮೂದಿಸುವುದಕ್ಕಾಗಿ ಅರ್ಹತೆಗಳನ್ನು ನಿಯಮಿಸುವುದು;

(ಡಿ) ಪಟ್ಟಿಯಲ್ಲಿ ಹೆಸರನ್ನು ಸೇರಿಸುವ ಉದ್ದೇಶಕ್ಕಾಗಿ ವಿದೇಶಿ ವಿದ್ಯಾರ್ಹತೆಗಳಿಗೆ ಮತ್ತು ತರಬೇತಿಗೆ ಮನ್ನಣೆ ನೀಡುವುದು;

(ಇ) ಈ ಅಧಿನಿಯಮದ ಮೇರೆಗೆ ವೃತ್ತಿ ಪ್ರಮಾಣಪತ್ರಗಳನ್ನು ಮಂಜೂರು ಮಾಡುವುದು ಅಥವಾ ನಿರಾಕರಿಸುವುದು;

(ಎಫ್) ಚಾರ್ಟರ್ಡ್ ಅಕೌಂಟೆಂಟರಾಗಿ ವೃತ್ತಿ ನಡೆಸಲು ಅರ್ಹರಾಗಿರುವ ವ್ಯಕ್ತಿಗಳ ಒಂದು ರಿಜಿಸ್ಟರನ್ನು ಇಟ್ಟುಕೊಂಡು ಬರುವುದು ಮತ್ತು ಪ್ರಕಟಿಸುವುದು;

(ಜಿ) ಸದಸ್ಯರು, ಪರೀಕ್ಷಾರ್ಥಿಗಳು ಮತ್ತು ಇತರೆ ವ್ಯಕ್ತಿಗಳಿಗೆ ಫೀಜುಗಳನ್ನು ವಿಧಿಸುವುದು ಮತ್ತು ಅವರಿಂದ ಸಂಗ್ರಹಿಸುವುದು;

(ಹೆಚ್) ರಿಜಿಸ್ಟರಿನಿಂದ ಹೆಸರುಗಳನ್ನು ತೆಗೆದುಹಾಕುವುದು ಮತ್ತು ಹಾಗೆ ತೆಗೆದುಹಾಕಲಾದ ಹೆಸರುಗಳನ್ನು ಪುನಃ ರಿಜಿಸ್ಟರಿಗೆ ಸೇರಿಸುವುದು;

(ಐ) ಸಂಸ್ಥೆಯ ಸದಸ್ಯರುಗಳ ವೃತ್ತೀಯ ಅರ್ಹತೆಗಳ ಸ್ಥಾನಮಾನ ಮತ್ತು ಗುಣಮಟ್ಟಗಳನ್ನು ವಿನಿಯಮಿಸುವುದು ಮತ್ತು ನಿರ್ವಹಿಸುವುದು;

(ಜೆ) ಪರಿಷತ್ತಿನ ಸದಸ್ಯರಲ್ಲದ ಇತರೆ ವ್ಯಕ್ತಿಗಳಿಗೆ ಯಾವುದೇ ರೀತಿಯಲ್ಲಿ ಹಣಕಾಸು ನೆರವು ನೀಡುವ ಮೂಲಕ ಅಕೌಂಟೆನ್ಸಿಯಲ್ಲಿ ಸಂಶೋಧನೆ ನಡೆಸುವುದು;

(ಕೆ) ಅಕೌಂಟೆನ್ಸಿಗೆ ಸಂಬಂಧಿಸಿದ ಗ್ರಂಥಾಲಯವನ್ನು ನಿರ್ವಹಿಸುವುದು ಮತ್ತು ಪುಸ್ತಕಗಳು ಮತ್ತು ನಿಯತಕಾಲಿಕೆಗಳನ್ನು ಪ್ರಕಟಿಸುವುದು;

(ಎಲ್) ಈ ಅಧಿನಿಯಮದಿಂದ ಪ್ರದತ್ತವಾದ ಶಿಸ್ತಿಗೆ ಸಂಬಂಧಿಸಿದ ಅಧಿಕಾರಗಳನ್ನು ಚಲಾಯಿಸುವುದು.

**16. ಸಿಬ್ಬಂದಿ, ಸಂಭಾವನೆ ಮತ್ತು ಭತ್ಯೆಗಳು.–** (1) ಪರಿಷತ್ತು,– ತನ್ನ ಕರ್ತವ್ಯಗಳ ದಕ್ಷ ನಿರ್ವಹಣೆಗಾಗಿ,–

(ಎ) ಒಬ್ಬ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಳ್ಳಬಹುದು, ಪರಿಷತ್ತು ತೀರ್ಮಾನಿಸಿದರೆ ಅವನು ಖಜಾಂಚಿಯಾಗಿಯು ಸಹ ಕೆಲಸ ನಿರ್ವಹಿಸಬಹುದು;

(ಬಿ) ತಾನು ಅವಶ್ಯವೆಂದು ಭಾವಿಸುವಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಕ ಮಾಡಿಕೊಳ್ಳಬಹುದು;

(ಸಿ) ಪರಿಷತ್ತು, ತನ್ನ ಕಾರ್ಯದರ್ಶಿ ಅಥವಾ ಯಾರೇ ಅಧಿಕಾರಿ ಅಥವಾ ನೌಕರನು ತನ್ನ ಕರ್ತವ್ಯಗಳನ್ನು ಯುಕ್ತ ರೀತಿಯಲ್ಲಿ ನಿರ್ವಹಿಸಲು ಅಗತ್ಯವೆಂದು ತಾನು ಪರಿಗಣಿಸುವಂಥ ಭದ್ರತೆಯನ್ನು ಅವರಿಂದ ಅಗತ್ಯಪಡಿಸಬಹುದು ಮತ್ತು ತೆಗೆದುಕೊಳ್ಳಬಹುದು;

(ಡಿ) ಪರಿಷತ್ತಿನ ಅಧಿಕಾರಿಗಳ ಮತ್ತು ನೌಕರರ ಸಂಬಳ, ಫೀಜು, ಭತ್ಯೆ ಮತ್ತು ಸೇವೆಯ ಇತರ ಷರತ್ತುಗಳನ್ನು ನಿಗದಿಪಡಿಸಬಹುದು;

(ಇ) ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ಅಧ್ಯಕ್ಷನ, ಉಪಾಧ್ಯಕ್ಷನ ಮತ್ತು ಪರಿಷತ್ತಿನ ಇತರೆ ಸದಸ್ಯರ ಮತ್ತು ಅದರ ಸಮಿತಿಗಳ ಸದಸ್ಯರ ಭತ್ಯೆಗಳನ್ನು ನಿಗದಿಪಡಿಸಬಹುದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಪರಿಷತ್ತು ಮೊದಲ ಬಾರಿಗೆ ರಚನೆಯಾದ ಮೇಲೆ, ಕೇಂದ್ರ ಸರ್ಕಾರವು ಪರಿಷತ್ತಿನೊಡನೆ ಸಮಾಲೋಚಿಸಿ ನೇಮಕ ಮಾಡಿದ ಒಬ್ಬ ವ್ಯಕ್ತಿಯು ಕಾರ್ಯದರ್ಶಿಯಾಗಿರತಕ್ಕದ್ದು ಮತ್ತು ಅವನು ಕೇಂದ್ರ ಸರ್ಕಾರದ ಇಷ್ಟಪರ್ಯಂತ, ಆದರೆ ಅವನ ನೇಮಕಾತಿಯ ದಿನಾಂಕದಿಂದ ಮೂರು ವರ್ಷಗಳಿಗೆ ಮೀರದ ಅವಧಿಯವರೆಗೆ ಪದಧಾರಣ ಮಾಡಿರತಕ್ಕದ್ದು.

(3) ಪರಿಷತ್ತಿನ ಕಾರ್ಯದರ್ಶಿಯು, ಪರಿಷತ್ತಿನ ಸಭೆಗಳಲ್ಲಿ ಭಾಗವಹಿಸಲು ಹಕ್ಕುಳ್ಳವನಾಗಿರತಕ್ಕದ್ದು, ಆದರೆ ಅಲ್ಲಿ ಮತ ಚಲಾಯಿಸಲು ಹಕ್ಕುಳ್ಳವನಾಗತಕ್ಕದ್ದಲ್ಲ.

**17. ಪರಿಷತ್ತಿನ ಸಮಿತಿಗಳು.–**(1) ಪರಿಷತ್ತು, ತನ್ನ ಸದಸ್ಯರುಗಳ ಪೈಕಿಯಿಂದ ಈ ಕೆಳಕಂಡ ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳತಕ್ಕದ್ದು, ಎಂದರೆ:–

(i) ಕಾರ್ಯನಿರ್ವಾಹಕ ಸಮಿತಿ;

(ii) ಪರೀಕ್ಷಾ ಸಮಿತಿ; ಮತ್ತು

(iii) ಶಿಸ್ತು ಸಮಿತಿ.

(2) ಪರಿಷತ್ತು ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ತಾನು ಅವಶ್ಯವೆಂದು ಭಾವಿಸುವಂಥ ತನ್ನ ಸದಸ್ಯರುಗಳನ್ನೊಳಗೊಂಡ ಇತರೆ ಸಮಿತಿಗಳನ್ನು ಸಹ ರಚಿಸಬಹುದು ಮತ್ತು ಹಾಗೆ ರಚಿಸಿದ ಯಾವುದೇ ಸಮಿತಿಯು ಪರಿಷತ್ತಿನ ಮಂಜೂರಾತಿ ಪಡೆದು, ಸಮಿತಿಯು ವಿಹಿತವೆಂದು ಭಾವಿಸುವಂತೆ ಸಮಿತಿಯ ಸದಸ್ಯರ ಸಂಖ್ಯೆಯ ಮೂರನೇ ಎರಡರಷ್ಟು ಮೀರದಂಥ ಸಂಸ್ಥೆಯ ಇತರೆ ಸದಸ್ಯರನ್ನು ಸಹ-ಸದಸ್ಯರನ್ನಾಗಿ ಮಾಡಿಕೊಳ್ಳಬಹುದು ಮತ್ತು ಹಾಗೆ ಸಹ-ಸದಸ್ಯನಾಗಿ ಸೇರ್ಪಡೆಯಾದ ಯಾರೇ ಸದಸ್ಯನು ಸಮಿತಿಯ ಸದಸ್ಯನ ಎಲ್ಲ ಹಕ್ಕುಗಳನ್ನು ಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದು.

(3) ಪ್ರತಿಯೊಂದು ಸ್ಥಾಯಿ ಸಮಿತಿಯು, ಪದ ನಿಮಿತ್ತ ಅಧ್ಯಕ್ಷ ಮತ್ತು ಉಪಾಧ್ಯಕ್ಷನನ್ನು ಮತ್ತು ಪರಿಷತ್ತಿನಿಂದ ಚುನಾಯಿತರಾದ ಪರಿಷತ್ತಿನ ಇತರೆ ಮೂವರು ಸದಸ್ಯರುಗಳನ್ನು ಒಳಗೊಂಡಿರತಕ್ಕದ್ದು:

ಪರಂತು, ಶಿಸ್ತು ಸಮಿತಿಯ ಸಂಬಂಧದಲ್ಲಿ ಚುನಾಯಿತರಾಗಬೇಕಾದ ಸದಸ್ಯರ ಪೈಕಿ, ಪರಿಷತ್ತು ಇಬ್ಬರನ್ನು ಚುನಾಯಿಸಿಕೊಳ್ಳತಕ್ಕದ್ದು ಮತ್ತು ಮೂರನೆಯವನನ್ನು ಕೇಂದ್ರ ಸರ್ಕಾರದಿಂದ ಪರಿಷತ್ತಿಗೆ ನಾಮನಿರ್ದೇಶಿತರಾದ ವ್ಯಕ್ತಿಗಳ ಪೈಕಿಯಿಂದ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡತಕ್ಕದ್ದು.

(4) ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷನು ಅನುಕ್ರಮವಾಗಿ ಪ್ರತಿಯೊಂದು ಸ್ಥಾಯಿ ಸಮಿತಿಯ ಸಭಾಪತಿ ಮತ್ತು ಉಪ- ಸಭಾಪತಿಯಾಗಿರತಕ್ಕದ್ದು.

(5) ಸಭಾಪತಿ ಮತ್ತು ಉಪಸಭಾಪತಿಯನ್ನು ಹೊರತುಪಡಿಸಿ, ಸ್ಥಾಯಿ ಸಮಿತಿಯ ಪ್ರತಿಯೊಬ್ಬ ಸದಸ್ಯನು ತಾನು ಚುನಾಯಿತನಾದ ದಿನಾಂಕದಿಂದ ಒಂದು ವರ್ಷದವರೆಗೆ ಪದಧಾರಣ ಮಾಡಿರತಕ್ಕದ್ದು, ಆದರೆ, ಪರಿಷತ್ತಿನ ಸದಸ್ಯನಾಗಿರುವುದಕ್ಕೊಳಪಟ್ಟು ಅವನು ಮರು ಚುನಾವಣೆಗೆ ಅರ್ಹನಾಗಿರತಕ್ಕದ್ದು.

(6) ಸ್ಥಾಯೀ ಸಮಿತಿಗಳು, ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ಹಾಗೆ ಚಲಾಯಿಸುವಲ್ಲಿ ನಿಯಮಿಸಲಾದಂಥ ಷರತ್ತುಗಳಿಗೊಳಪಟ್ಟಿರತಕ್ಕದ್ದು.

**18. ಪರಿಷತ್ತಿನ ಹಣಕಾಸು.**–(1) ಪರಿಷತ್ತಿನ ವ್ಯವಸ್ಥಾಪನೆ ಮತ್ತು ನಿಯಂತ್ರಣದ ಅಡಿಯಲ್ಲಿ ಒಂದು ನಿಧಿಯು ಸ್ಥಾಪಿತವಾಗತಕ್ಕದ್ದು ಮತ್ತು ಪರಿಷತ್ತು ಸ್ವೀಕರಿಸಿದ ಎಲ್ಲ ಹಣಕಾಸುಗಳು ಅದಕ್ಕೆ ಸಂದಾಯವಾಗತಕ್ಕದ್ದು, ಮತ್ತು ಪರಿಷತ್ತು ಯುಕ್ತವಾಗಿ ಭರಿಸಬೇಕಾದ ಎಲ್ಲ ವೆಚ್ಚಗಳನ್ನು ಮತ್ತು ಹೊಣೆಗಳನ್ನು ಅದರಿಂದ ವಹಿಸತಕ್ಕದ್ದು.

(2) ಪರಿಷತ್ತು, ತತ್ಕಾಲದಲ್ಲಿ ನಿಧಿಯ ಖಾತೆಗೆ ಜಮೆಯಾಗಿರತಕ್ಕ ಯಾವುದೇ ಹಣವನ್ನು ಕೇಂದ್ರ ಸರ್ಕಾರವು ಅನುಮೋದಿಸಿದಂಥ ಯಾವುದೇ ಸರ್ಕಾರೀ ಭದ್ರತೆಯಲ್ಲಿ ಅಥವಾ ಯಾವುದೇ ಇತರ ಭದ್ರತೆಯಲ್ಲಿ ಹೂಡಬಹುದು.

(3) ಪರಿಷತ್ತು, ರಾಜಸ್ವದಿಂದ ಬಂಡವಾಳವನ್ನು ವಿಭಿನ್ನವಾಗಿ ತೋರಿಸುವಂತೆ ನಿಧಿಯ ಲೆಕ್ಕಪತ್ರಗಳನ್ನು ಯುಕ್ತವಾಗಿ ಇಡತಕ್ಕದ್ದು.

(4) ಪರಿಷತ್ತಿನ ವಾರ್ಷಿಕ ಲೆಕ್ಕಪತ್ರಗಳು, ಪರಿಷತ್ತು ವಾರ್ಷಿಕವಾಗಿ ನೇಮಕ ಮಾಡಬೇಕಾದ ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟ್‌ರಿಂದ ಲೆಕ್ಕಪರಿಶೋಧನೆಗೊಳಪಟ್ಟಿರತಕ್ಕದ್ದು:

ಪರಂತು, ಪರಿಷತ್ತಿನ ಯಾರೇ ಸದಸ್ಯನು ಅಥವಾ ಅಂಥ ಸದಸ್ಯನೊಂದಿಗೆ ಪಾಲುಗಾರಿಕೆಯಲ್ಲಿರುವ ಯಾರೇ ವ್ಯಕ್ತಿಯು ಈ ಉಪಪ್ರಕರಣದ ಅಡಿಯಲ್ಲಿ ಒಬ್ಬ ಲೆಕ್ಕಪರಿಶೋಧಕನಾಗಿ ನೇಮಕಗೊಳ್ಳಲು ಅರ್ಹನಾಗತಕ್ಕದ್ದಲ್ಲ.

(5) ಪ್ರತಿಯೊಂದು ವರ್ಷದ ಕೊನೆಯಲ್ಲಿ ಕಾರ್ಯಸಾಧ್ಯವಾಗಬಹುದಾದಷ್ಟು ಬೇಗನೆ, ಆದರೆ ಮುಂದಿನ ವರ್ಷದ ಸೆಪ್ಟೆಂಬರ್ 30ನೇ ದಿನಾಂಕಕ್ಕಿಂತ ತಡವಾಗದಂತೆ, ಪರಿಷತ್ತು ಆ ವರ್ಷದ ಪರಿಶೋಧಿತ ಲೆಕ್ಕಪತ್ರಗಳ ಮತ್ತು ಪರಿಷತ್ತಿನ ವರದಿಯ ಒಂದು ಪ್ರತಿಯನ್ನು ಭಾರತದ ರಾಜಪತ್ರದಲ್ಲಿ ಪ್ರಕಟವಾಗುವಂತೆ ಮಾಡತಕ್ಕದ್ದು ಮತ್ತು ಸದರಿ ಲೆಕ್ಕಪತ್ರಗಳ ಮತ್ತು ವರದಿಯ ಪ್ರತಿಗಳನ್ನು ಕೇಂದ್ರ ಸರ್ಕಾರಕ್ಕೆ ಮತ್ತು ಸಂಸ್ಥೆಯ ಎಲ್ಲ ಸದಸ್ಯರಿಗೆ ಕಳುಹಿಸಿಕೊಡತಕ್ಕದ್ದು.

(6) ಪರಿಷತ್ತು, ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ರಲ್ಲಿ ಪರಿಭಾಷಿಸಿರುವಂಥ ಒಂದು ಅನುಸೂಚಿತ ಬ್ಯಾಂಕ್‌ನಿಂದ ಅಥವಾ ಕೇಂದ್ರ ಸರ್ಕಾರದಿಂದ,–

(ಎ) ನಿಧಿಯ ಭದ್ರತೆಯ ಮೇಲೆ ಅಥವಾ ಅದಕ್ಕೆ ತತ್ಕಾಲದಲ್ಲಿ ಸೇರಿರುವ ಯಾವುದೇ ಇತರೆ ಆಸ್ತಿಗಳ ಭದ್ರತೆಯ ಮೇಲೆ ಬಂಡವಾಳ ಲೆಕ್ಕದ ಹೊಣೆಗಳನ್ನು ಭರಿಸುವುದಕ್ಕಾಗಿ ಅಗತ್ಯವಿರುವ ಯಾವುದೇ ಹಣವನ್ನು; ಅಥವಾ

(ಬಿ) ಆದಾಯ ಬರುವವರೆಗೆ ತತ್ಕಾಲದ ಹೊಣೆಗಳನ್ನು ಭರಿಸುವ ಉದ್ದೇಶಕ್ಕಾಗಿ ತಾತ್ಕಾಲಿಕ ಸಾಲದ ರೂಪದಲ್ಲಿ ಅಥವಾ ಓವರ್ ಡ್ರಾಫ್ಟ್ ರೂಪದಲ್ಲಿ

– ಸಾಲ ತೆಗೆದುಕೊಳ್ಳಬಹುದು.

## ಅಧ್ಯಾಯ – IV

## ಸದಸ್ಯರ ರಿಜಿಸ್ಟರು

**19. ರಿಜಿಸ್ಟರು.**–(1) ಪರಿಷತ್ತು, ನಿಯಮಿಸಿದ ರೀತಿಯಲ್ಲಿ ಸಂಸ್ಥೆಯ ಸದಸ್ಯರ ಒಂದು ರಿಜಿಸ್ಟರನ್ನು ನಿರ್ವಹಿಸತಕ್ಕದ್ದು.

(2) ರಿಜಿಸ್ಟರು, ಸಂಸ್ಥೆಯ ಪ್ರತಿಯೊಬ್ಬ ಸದಸ್ಯನ ಈ ಕೆಳಕಂಡ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಅವನ ಪೂರ್ಣ ಹೆಸರು, ಜನ್ಮ ದಿನಾಂಕ, ಅಧಿವಾಸ, ನಿವಾಸದ ಮತ್ತು ವೃತ್ತೀಯ ವಿಳಾಸ;

(ಬಿ) ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸಿದ ದಿನಾಂಕ;

(ಸಿ) ಅವನ ವಿದ್ಯಾರ್ಹತೆಗಳು;

(ಡಿ) ಅವನು ವೃತ್ತಿ ಪ್ರಮಾಣಪತ್ರ ಹೊಂದಿದ್ದಾನೆಯೇ; ಮತ್ತು

(ಇ) ನಿಯಮಿಸಬಹುದಾದ ಯಾವುವೇ ಇತರೆ ವಿವರಗಳು.

(3) ಪರಿಷತ್ತು, ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರತಿವರ್ಷದ ಏಪ್ರಿಲ್ 1ನೇ ದಿನಾಂಕದಂದು ಇದ್ದಂತೆ ಸಂಸ್ಥೆಯ ಸದಸ್ಯರ ಪಟ್ಟಿಯನ್ನು ಪ್ರಕಟವಾಗುವಂತೆ ಮಾಡತಕ್ಕದ್ದು ಮತ್ತು ಯಾರೇ ಸದಸ್ಯನು ಅಂಥ ಪಟ್ಟಿಯ ಪ್ರತಿಯನ್ನು ಕೋರಿದರೆ ಅದನ್ನು ಅವನಿಗೆ ಕಳುಹಿಸತಕ್ಕದ್ದು.

(4) ಸಂಸ್ಥೆಯ ಪ್ರತಿಯೊಬ್ಬ ಸದಸ್ಯನು, ರಿಜಿಸ್ಟರಿನಲ್ಲಿ ಅವನ ಹೆಸರು ನಮೂದಾದ ಮೇಲೆ, ಸಂಸ್ಥೆಯ ಒಬ್ಬ ಸಹಸದಸ್ಯನಾಗಿರುವುದಕ್ಕೆ ಅಥವಾ ಫೆಲೋಸದಸ್ಯನಾಗಿರುವುದಕ್ಕೆ ಅನುಸಾರವಾಗಿ ವ್ಯತ್ಯಾಸವಾಗುವ ನಿಯಮಿಸ ಬಹುದಾದಂಥ ವಾರ್ಷಿಕ ಸದಸ್ಯತ್ವದ ಶುಲ್ಕ ಪಾವತಿ ಮಾಡತಕ್ಕದ್ದು.

**20. ರಿಜಿಸ್ಟರಿನಿಂದ ಹೆಸರು ತೆಗೆದುಹಾಕುವುದು.**–(1) ಪರಿಷತ್ತು ಈ ಕೆಳಕಂಡ ಸಂದರ್ಭಗಳಲ್ಲಿ ಸಂಸ್ಥೆಯ ಯಾರೇ ಸದಸ್ಯರ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕಬಹುದು,–

(ಎ) ಅವನು ಮರಣ ಹೊಂದಿದ್ದರೆ; ಅಥವಾ

(ಬಿ) ತನ್ನ ಹೆಸರನ್ನು ತೆಗೆದುಹಾಕಬೇಕೆಂದು ಅವನಿಂದ ಕೋರಿಕೆ ಬಂದಿದ್ದರೆ; ಅಥವಾ

(ಸಿ) ತಾನು ಸಂದಾಯ ಮಾಡಬೇಕಾದ ನಿಯಮಿಸಿದ ಯಾವುದೇ ಫೀಜನ್ನು ಸಂದಾಯ ಮಾಡದಿದ್ದರೆ; ಅಥವಾ

(ಡಿ) ರಿಜಿಸ್ಟರಿನಲ್ಲಿ ಅವನ ಹೆಸರನ್ನು ನಮೂದಿಸಿದಾಗ, ಅವನು 8ನೇ ಪ್ರಕರಣದಲ್ಲಿ ಸೂಚಿಸಿರುವ ಯಾವುದೇ ಅಶಕ್ತತೆಗೆ ಒಳಪಟ್ಟಿದ್ದನೆಂದು ಅಥವಾ ಆ ತರುವಾಯ ಒಳಪಟ್ಟಿದ್ದಾನೆಂದು ಕಂಡು ಬಂದರೆ ಅಥವಾ ಯಾವುದೇ ಇತರ ಕಾರಣಕ್ಕಾಗಿ ರಿಜಿಸ್ಟರಿನಲ್ಲಿ ತನ್ನ ಹೆಸರು ಹೊಂದಿರಲು ಹಕ್ಕುಳ್ಳವನಾಗಿರುವುದು ನಿಂತುಹೋದರೆ.

(2) ಯಾರೇ ಸದಸ್ಯನ ಸಂಬಂಧದಲ್ಲಿ, ಅವನ ಹೆಸರನ್ನು ಸಂಸ್ಥೆಯ ಸದಸ್ಯತ್ವದಿಂದ ತೆಗೆದುಹಾಕಬೇಕೆಂದು ಈ ಅಧಿನಿಯಮದ ಅಡಿಯಲ್ಲಿ ಒಂದು ಆದೇಶ ಹೊರಡಿಸಿದರೆ, ಪರಿಷತ್ತು, ರಿಜಿಸ್ಟರಿನಿಂದ ಅಂಥ ಸದಸ್ಯನ ಹೆಸರನ್ನು ತೆಗೆದುಹಾಕತಕ್ಕದ್ದು.

# ಅಧ್ಯಾಯ – V

## ದುರ್ನಡತೆ

**21. ಸಂಸ್ಥೆಯ ಸದಸ್ಯರ ದುರ್ನಡತೆ ಸಂಬಂಧದಲ್ಲಿನ ವಿಚಾರಣೆಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ.–**(1) ಪರಿಷತ್ತು ಯಾವುದೇ ಮಾಹಿತಿಯನ್ನು ಸ್ವೀಕರಿಸಿದ ತರುವಾಯ ಅದಕ್ಕೆ ಸಲ್ಲಿಸಿದ ದೂರಿನ ಮೇಲೆ ಮೊದಲ ನೋಟದಲ್ಲೇ ಸಂಸ್ಥೆಯ ಯಾರೇ ಸದಸ್ಯನು ಯಾವುದೇ ವೃತ್ತೀಯ ಅಥವಾ ಇತರೆ ದುರ್ನಡತೆಯ ತಪ್ಪನ್ನೆಸಗಿದ್ದಾನೆಂದು ಅಭಿಪ್ರಾಯಪಟ್ಟಲ್ಲಿ, ಪರಿಷತ್ತು ಅಂಥ ಪ್ರಕರಣವನ್ನು ಶಿಸ್ತು ಸಮಿತಿಗೆ ಒಪ್ಪಿಸತಕ್ಕದ್ದು ಮತ್ತು ಶಿಸ್ತು ಸಮಿತಿಯು, ಆ ತರುವಾಯ ಅಂಥ ವಿಚಾರಣೆಯನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ನಡೆಸತಕ್ಕದ್ದು ಮತ್ತು ಅದರ ವಿಚಾರಣಾ ಫಲಿತಾಂಶವನ್ನು ಪರಿಷತ್ತಿಗೆ ವರದಿ ಮಾಡತಕ್ಕದ್ದು.

(2) ಪರಿಷತ್ತು ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ, ಸಂಸ್ಥೆಯ ಆ ಸದಸ್ಯನು ಯಾವುದೇ ವೃತ್ತೀಯ ಅಥವಾ ಇತರೆ ದುರ್ನಡತೆಯ ತಪ್ಪಿತಸ್ಥನಲ್ಲವೆಂದು ಮನಗಂಡರೆ, ಅದರ ನಿರ್ಣಯವನ್ನು ತದನುಸಾರವಾಗಿ ದಾಖಲು ಮಾಡತಕ್ಕದ್ದು ಮತ್ತು ವ್ಯವಹರಣೆಗಳನ್ನು ಕಡತಕ್ಕೆ ಸೇರಿಸತಕ್ಕದ್ದೆಂದು ಅಥವಾ ಸಂದರ್ಭಾನುಸಾರ, ದೂರನ್ನು ವಜಾ ಮಾಡತಕ್ಕದ್ದೆಂದು ನಿರ್ದೇಶಿಸತಕ್ಕದ್ದು.

(3) ಅಂಥ ವರದಿಯನ್ನು ಸ್ವೀಕರಿಸಿದ ಮೇಲೆ, ಸಂಸ್ಥೆಯ ಆ ಸದಸ್ಯನು ಯಾವುದೇ ವೃತ್ತೀಯ ಅಥವಾ ಇತರೆ ದುರ್ನಡತೆಯ ತಪ್ಪಿತಸ್ಥನೆಂದು ಪರಿಷತ್ತಿಗೆ ಕಂಡುಬಂದರೆ, ಅದರ ನಿರ್ಣಯವನ್ನು ತದನುಸಾರವಾಗಿ ದಾಖಲು ಮಾಡತಕ್ಕದ್ದು ಮತ್ತು ತರುವಾಯದ ಉಪಪ್ರಕರಣಗಳಲ್ಲಿ ನಿರೂಪಿಸಲಾದ ರೀತಿಯಲ್ಲಿ ಮುಂದುವರಿಯತಕ್ಕದ್ದು.

(4) ಸಂಸ್ಥೆಯ ಸದಸ್ಯನು ಮೊದಲನೆಯ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ವೃತ್ತೀಯ ದುರ್ನಡತೆಯ ತಪ್ಪಿತಸ್ಥನಾಗಿರುವನೆಂಬ ನಿರ್ಣಯವಾಗಿರುವಲ್ಲಿ, ಪರಿಷತ್ತು ಆ ಸದಸ್ಯನಿಗೆ ಆ ಪ್ರಕರಣದಲ್ಲಿ ಅವನ ವಿರುದ್ಧ ಆದೇಶಗಳನ್ನು ಮಾಡುವುದಕ್ಕೆ ಮುಂಚೆ ತನ್ನ ಅಹವಾಲನ್ನು ಹೇಳಿಕೊಳ್ಳುವ ಒಂದು ಅವಕಾಶವನ್ನು ಅವನಿಗೆ ಕೊಡತಕ್ಕದ್ದು ಮತ್ತು ಅನಂತರ ಈ ಮುಂದಿನವುಗಳ ಪೈಕಿ ಯಾವುದೇ ಆದೇಶವನ್ನು ಮಾಡಬಹುದು, ಎಂದರೆ:–

(ಎ) ಸದಸ್ಯನಿಗೆ ವಾಗ್ದಂಡನೆ ನೀಡುವುದು;

(ಬಿ) ಪರಿಷತ್ತು ತಾನು ಯುಕ್ತವೆಂದು ಭಾವಿಸುವಂತೆ ಐದು ವರ್ಷಗಳಿಗೆ ಮೀರದಂಥ ಅವಧಿಯವರೆಗೆ ಅವನ ಹೆಸರನ್ನು ರಿಜಿಸ್ಟರಿನಿಂದ ತೆಗೆದುಹಾಕುವುದು:

ಪರಂತು, ಆ ಪ್ರಕರಣವು, ಸದಸ್ಯನ ಹೆಸರನ್ನು ಐದು ವರ್ಷಗಳಿಗೆ ಮೀರಿದ ಅವಧಿಯವರೆಗೆ ಅಥವಾ ಖಾಯಂ ಆಗಿ ರಿಜಿಸ್ಟರಿನಿಂದ ತೆಗೆಯಬೇಕಾದಂಥ ಒಂದು ಪ್ರಕರಣವೆಂಬುದಾಗಿ ಪರಿಷತ್ತಿಗೆ ಕಂಡುಬಂದಲ್ಲಿ, (ಎ) ಅಥವಾ (ಬಿ) ಖಂಡದಲ್ಲಿ ಉಲ್ಲೇಖಿಸಿರುವ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ, ಆದರೆ ಆ ಪ್ರಕರಣವನ್ನು ಅದರ ಮೇಲಿನ ತನ್ನ ಶಿಫಾರಸುಗಳೊಂದಿಗೆ ಉಚ್ಚ ನ್ಯಾಯಾಲಯಕ್ಕೆ ಕಳುಹಿಸತಕ್ಕದ್ದು.

(5) ಸಂಸ್ಥೆಯ ಯಾರೇ ಸದಸ್ಯನ ದುರ್ನಡತೆಯ ಸಂಬಂಧದಲ್ಲಿ ಅಂಥ ತಪ್ಪು (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವಂಥ ದುರ್ನಡತೆಯನ್ನು ಹೊರತುಪಡಿಸಿದ ದುರ್ನಡತೆಯಾಗಿರುವುದೆಂದು ಪರಿಷತ್ತಿಗೆ ಕಂಡುಬಂದಲ್ಲಿ ಆ ಪ್ರಕರಣವನ್ನು ಅದರ ಮೇಲಿನ ಶಿಫಾರಸುಗಳೊಂದಿಗೆ ಉಚ್ಚ ನ್ಯಾಯಾಲಯಕ್ಕೆ ಕಳುಹಿಸಿಕೊಡತಕ್ಕದ್ದು.

(6) 4ನೇ ಉಪಪ್ರಕರಣ ಅಥವಾ 5ನೇ ಉಪಪ್ರಕರಣದ ಮೇರೆಗೆ ಯಾವುದೇ ಪ್ರಕರಣವನ್ನು ಸ್ವೀಕರಿಸಿದ ಮೇಲೆ, ಉಚ್ಚ ನ್ಯಾಯಾಲಯವು ಆ ಪ್ರಕರಣದ ಸಂಬಂಧದಲ್ಲಿ ಅಹವಾಲು ಹೇಳಿಕೊಳ್ಳುವ ಸಲುವಾಗಿ ದಿನಾಂಕವನ್ನು ನಿಗದಿಪಡಿಸತಕ್ಕದ್ದು ಮತ್ತು ಹಾಗೆ ನಿಗದಿಪಡಿಸಿದ ದಿನಾಂಕದ ನೋಟೀಸನ್ನು ಸಂಸ್ಥೆಯ ಸಂಬಂಧಪಟ್ಟ ಸದಸ್ಯನಿಗೆ, ಪರಿಷತ್ತಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಕೊಡತಕ್ಕದ್ದು ಮತ್ತು ಅಂಥ ಸದಸ್ಯನಿಗೆ, ಪರಿಷತ್ತಿಗೆ ಮತ್ತು ಕೇಂದ್ರ ಸರ್ಕಾರಕ್ಕೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡತಕ್ಕದ್ದು ಮತ್ತು ಆನಂತರ ಈ ಮುಂದಿನವುಗಳ ಪೈಕಿ ಯಾವುವೇ ಆದೇಶ ಮಾಡಬಹುದು, ಎಂದರೆ:–

(ಎ) ವ್ಯವಹರಣೆಗಳನ್ನು ಕಡತಕ್ಕೆ ಸೇರಿಸಲು ಅಥವಾ ಸಂದರ್ಭಾನುಸಾರ, ದೂರನ್ನು ವಜಾ ಮಾಡಲು ನಿರ್ದೇಶಿಸುವುದು;

(ಬಿ) ಸದಸ್ಯನಿಗೆ ವಾಗ್ದಂಡನೆ ನೀಡುವುದು;

(ಸಿ) ಅವನನ್ನು, ಖಾಯಂ ಆಗಿಯಾಗಲಿ ಅಥವಾ ಉಚ್ಚ ನ್ಯಾಯಾಲಯವು ಸೂಕ್ತವೆಂದು ಭಾವಿಸುವಂಥ ಅವಧಿಯವರೆಗಾಗಲಿ ಸಂಸ್ಥೆಯ ಸದಸ್ಯತ್ವದಿಂದ ತೆಗೆದುಹಾಕುವುದು;

(ಡಿ) ಹೆಚ್ಚಿನ ವಿಚಾರಣೆ ಮತ್ತು ವರದಿಗಾಗಿ ಪ್ರಕರಣವನ್ನು ಪರಿಷತ್ತಿಗೆ ಉಲ್ಲೇಖಿಸುವುದು.

(7) ಉಚ್ಚ ನ್ಯಾಯಾಲಯವು, ಅದರ ಮುಂದೆ ಬಾಕಿ ಇರುವ ಯಾವುದೇ ಪ್ರಕರಣವನ್ನು ಮತ್ತೊಂದು ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸುವುದರಿಂದ ನ್ಯಾಯೋದ್ದೇಶ ಈಡೇರುವುದೆಂದು ಅಥವಾ ಪಕ್ಷಕಾರರ ಸಾಮಾನ್ಯ ಸೌಕರ್ಯಕ್ಕೆ ಅನುಕೂಲವಾಗುವುದೆಂದು ಕಂಡುಬಂದರೆ, ತಾನು ವಿಧಿಸುವುದು ವಿಹಿತವೆಂದು ಭಾವಿಸುವಂಥ ಯಾವುವೇ ಷರತ್ತುಗಳಿಗೊಳಪಟ್ಟು, ಪ್ರಕರಣವನ್ನು ಹಾಗೆ ವರ್ಗಾಯಿಸಬಹುದು ಮತ್ತು ಪ್ರಕರಣವನ್ನು ಯಾವ ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದೆಯೋ ಆ ಉಚ್ಚ ನ್ಯಾಯಾಲಯವು ಹಾಗೆ ವರ್ಗಾವಣೆಯಾದಂಥ ಪ್ರಕರಣವನ್ನು ತನಗೆ ಪರಿಷತ್ತೇ ಕಳಿಸಿಕೊಟ್ಟಿದ್ದರೆ ಹೇಗೆ ವ್ಯವಹರಿಸಬಹುದಾಗಿತ್ತೋ ಹಾಗೆ ವ್ಯವಹರಿಸತಕ್ಕದ್ದು.

**ವಿವರಣೆ.-I** ಈ ಪ್ರಕರಣದಲ್ಲಿ "ಉಚ್ಚ ನ್ಯಾಯಾಲಯ" ಎಂದರೆ, ಯಾವ ವ್ಯಕ್ತಿಯ ನಡತೆಯನ್ನು ಕುರಿತಂತೆ ವಿಚಾರಣೆ ನಡೆಸಲಾಗುತ್ತಿದೆಯೋ ಆ ವ್ಯಕ್ತಿಯು, ವಿಚಾರಣೆಯ ಪ್ರಾರಂಭದ ಸಮಯಕ್ಕೆ ತನ್ನ ವ್ಯವಹಾರ ನಡೆಸುತ್ತಿರುವ ಅಥವಾ ತನ್ನ ವ್ಯವಹಾರದ ಪ್ರಧಾನ ಸ್ಥಳವನ್ನು ಹೊಂದಿರುವಂಥ ಪ್ರದೇಶದಲ್ಲಿ ಅಧಿಕಾರ ಚಲಾಯಿಸುತ್ತಿರುವ ಉಚ್ಚತಮ ಸಿವಿಲ್ ಅಪೀಲು ನ್ಯಾಯಾಲಯ, ಆದರೆ ಇದರಲ್ಲಿ ಸರ್ವೋಚ್ಚ ನ್ಯಾಯಾಲಯವು ಒಳಗೊಳ್ಳುವುದಿಲ್ಲ:

ಪರಂತು, ಸಂಸ್ಥೆಯ ಇಬ್ಬರು ಅಥವಾ ಹೆಚ್ಚು ಸದಸ್ಯರಿಗೆ ಸಂಬಂಧಿಸಿದ ಪ್ರಕರಣಗಳನ್ನು ಪರಿಷತ್ತು ಬೇರೆ ಬೇರೆ ಉಚ್ಚ ನ್ಯಾಯಾಲಯಗಳಿಗೆ ಕಳುಹಿಸಿಕೊಡಬೇಕಾಗಿರುವಲ್ಲಿ, ಕೇಂದ್ರ ಸರ್ಕಾರವು, ನ್ಯಾಯೋದ್ದೇಶಗಳಿಗೆ ಮತ್ತು ಪಕ್ಷಕಾರರ ಸಾಮಾನ್ಯ ಸೌಕರ್ಯಗಳಿಗೆ ಗಮನಕೊಟ್ಟು ಇತರ ಉಚ್ಚ ನ್ಯಾಯಾಲಯಗಳನ್ನು ಹೊರತುಪಡಿಸಿ, ಯಾವ ಉಚ್ಚ ನ್ಯಾಯಾಲಯವು ಆ ಎಲ್ಲ ಸದಸ್ಯರ ವಿರುದ್ಧದ ಪ್ರಕರಣಗಳ ಅಹವಾಲುಗಳನ್ನು ಕೇಳತಕ್ಕದ್ದೆಂಬುದನ್ನು ನಿರ್ಧರಿಸತಕ್ಕದ್ದು.

**ವಿವರಣೆ II.-** ಈ ಪ್ರಕರಣದ ಉದ್ದೇಶಕ್ಕಾಗಿ "ಸಂಸ್ಥೆಯ ಸದಸ್ಯ" ಎಂಬುದರಲ್ಲಿ ವಿಚಾರಣೆಯ ಸಮಯದಲ್ಲಿ ಸಂಸ್ಥೆಯ ಸದಸ್ಯನಾಗಿರುವುದು ನಿಂತುಹೋಗಿದ್ದರೂ ಸಹ ಆಪಾದಿತ ದುರ್ನಡತೆಯು ನಡೆದ ದಿನಾಂಕದಂದು ಯಾರು ಸಂಸ್ಥೆಯ ಸದಸ್ಯನಾಗಿದ್ದನೋ ಆ ಒಬ್ಬ ವ್ಯಕ್ತಿಯು ಸೇರುತ್ತಾನೆ.

(8) ಈ ಪ್ರಕರಣದ ಅಡಿಯಲ್ಲಿನ ಯಾವುದೇ ವಿಚಾರಣೆಯ ಉದ್ದೇಶಕ್ಕಾಗಿ, ಪರಿಷತ್ತು ಮತ್ತು ಶಿಸ್ತು ಸಮಿತಿಯು, ಈ ಮುಂದಿನ ವಿಷಯಗಳ ಸಂಬಂಧದಲ್ಲಿ 1908ರ ಸಿವಿಲ್ ಪ್ರಕ್ರಿಯಾ ಸಂಹಿತೆ (1908ರ 5)ರ ಅಡಿಯಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥ ಅಧಿಕಾರಗಳನ್ನೇ ಹೊಂದಿರತಕ್ಕದ್ದು, ಎಂದರೆ:-

(ಎ) ಯಾರೇ ವ್ಯಕ್ತಿಗೆ ಸಮನು ಕಳುಹಿಸುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಮತ್ತು ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು;

(ಬಿ) ಯಾವುವೇ ದಸ್ತಾವೇಜುಗಳನ್ನು ಶೋಧಿಸುವುದು ಮತ್ತು ಹಾಜರುಪಡಿಸುವುದು; ಮತ್ತು

(ಸಿ) ಅಫಿಡಾವಿಟ್ ಮೇಲೆ ಸಾಕ್ಷ್ಯ ಪಡೆಯುವುದು.

**22. ವೃತ್ತೀಯ ದುರ್ನಡತೆಯನ್ನು ಪರಿಭಾಷಿಸುವುದು.-** ಈ ಅಧಿನಿಯಮದ ಉದ್ದೇಶಗಳಿಗಾಗಿ,"ವೃತ್ತೀಯ ದುರ್ನಡತೆ" ಎಂಬ ಪದಾವಳಿಯು, ಯಾವುದೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಯಾವುವೇ ಕೃತ್ಯ ಅಥವಾ ಲೋಪ ಇವುಗಳು ಸೇರುತ್ತವೆಂದು ಭಾವಿಸತಕ್ಕದ್ದು, ಆದರೆ ಈ ಪ್ರಕರಣದಲ್ಲಿರುವುದಾವುದೂ, ಯಾವುವೇ ಇತರ ಸನ್ನಿವೇಶಗಳಲ್ಲಿ ಸಂಸ್ಥೆಯ ಯಾರೇ ಸದಸ್ಯನ ನಡತೆಯ ಬಗ್ಗೆ ವಿಚಾರಣೆ ಮಾಡುವುದಕ್ಕೆ 21ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಪರಿಷತ್ತಿಗೆ ವಹಿಸಿಕೊಡಲಾದ ಅಧಿಕಾರವನ್ನು ಅಥವಾ ನಿಯಮಿಸಲಾದ ಕರ್ತವ್ಯವನ್ನು ಯಾವುದೇ ರೀತಿಯಲ್ಲಿ ಪರಿಮಿತಿಗೊಳಿಸುವುದೆಂದು ಅಥವಾ ಸಂಕ್ಷೇಪಗೊಳಿಸುವುದೆಂದು ಅರ್ಥೈಸತಕ್ಕದ್ದಲ್ಲ.

**22ಎ. ಅಪೀಲುಗಳು.-** (1) 21ನೇ ಪ್ರಕರಣದ (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ಪೈಕಿ ಯಾವುವೇ ದಂಡನೆಗಳನ್ನು ವಿಧಿಸಿ ಪರಿಷತ್ತು ಹೊರಡಿಸಿದ ಯಾವುದೇ ಆದೇಶದಿಂದ ಬಾಧಿತನಾದ ಸಂಸ್ಥೆಯ ಯಾರೇ ಸದಸ್ಯನು, ಅವನಿಗೆ ಆದೇಶವನ್ನು ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಆ ಸದಸ್ಯನು ಸಕಾಲದಲ್ಲಿ ಅಪೀಲು ಸಲ್ಲಿಸದಿರಲು ಸಾಕಷ್ಟು ಕಾರಣದಿಂದಾಗಿ ಪ್ರತಿಬಂಧಿತನಾಗಿದ್ದನೆಂದು ಉಚ್ಚ ನ್ಯಾಯಾಲಯಕ್ಕೆ ಮನವರಿಕೆಯಾದರೆ, ಸದರಿ ಮೂವತ್ತು ದಿನಗಳ ಅವಧಿಯ ಮುಕ್ತಾಯದ ನಂತರವೂ ಅಂಥ ಯಾವುದೇ ಅಪೀಲನ್ನು ಪುರಸ್ಕರಿಸಬಹುದು.

(2) ಉಚ್ಚ ನ್ಯಾಯಾಲಯವು, ತನ್ನ ಸ್ವಂತ ನಿಲುವಿನ ಮೇಲೆ ಅಥವಾ ಅನ್ಯಥಾ, ಪ್ರಕರಣದ ದಾಖಲೆಗಳನ್ನು ತರಿಸಿಕೊಂಡ ತರುವಾಯ, 21ನೇ ಪ್ರಕರಣದ (2)ನೇ ಉಪಪ್ರಕರಣ ಅಥವಾ (4)ನೇ ಉಪಪ್ರಕರಣದ ಅಡಿಯಲ್ಲಿ ಪರಿಷತ್ತು ಮಾಡಿದ ಯಾವುದೇ ಆದೇಶವನ್ನು ಪರಿಷ್ಕರಿಸಬಹುದು, ಮತ್ತು–

(ಎ) ಸ್ಥಿರೀಕರಿಸಬಹುದು, ಮಾರ್ಪಾಟುಗೊಳಿಸಬಹುದು ಅಥವಾ ತಳ್ಳಿಹಾಕಬಹುದು;

(ಬಿ) ಯಾವುದೇ ದಂಡವನ್ನು ವಿಧಿಸಬಹುದು ಅಥವಾ ಆದೇಶದ ಮೂಲಕ ವಿಧಿಸಿದ ದಂಡವನ್ನು ತಳ್ಳಿಹಾಕಬಹುದು, ಕಡಿಮೆಮಾಡಬಹುದು, ಸ್ಥಿರೀಕರಿಸಬಹುದು ಅಥವಾ ಹೆಚ್ಚಿಸಬಹುದು;

(ಸಿ) ಪ್ರಕರಣದ ಸ್ಥಿತಿಗತಿಗಳನ್ನು ಪರಿಗಣಿಸಿ ಉಚ್ಚ ನ್ಯಾಯಾಲಯವು ಯುಕ್ತವೆಂದು ಭಾವಿಸುವಂಥ ಇನ್ನಷ್ಟು ವಿಚಾರಣೆಗಾಗಿ ಪರಿಷತ್ತಿಗೆ ಪ್ರಕರಣವನ್ನು ವಾಪಸು ಕಳುಹಿಸಬಹುದು; ಅಥವಾ

(ಡಿ) ಉಚ್ಚ ನ್ಯಾಯಾಲಯವು ವಿಹಿತವೆಂದು ಭಾವಿಸುವಂಥ ಇತರ ಆದೇಶವನ್ನು ಹೊರಡಿಸಬಹುದು:

ಪರಂತು, ಅಹವಾಲನ್ನು ಹೇಳಿಕೊಳ್ಳಲು ಪರಿಷತ್ತಿಗೆ ಅವಕಾಶ ನೀಡಿದ ಹೊರತು, ಪರಿಷತ್ತಿನ ಆದೇಶವನ್ನು ಮಾರ್ಪಾಟುಗೊಳಿಸತಕ್ಕದ್ದಲ್ಲ ಅಥವಾ ತಳ್ಳಿಹಾಕತಕ್ಕದ್ದಲ್ಲ ಮತ್ತು ಸಂಬಂಧಪಟ್ಟ ವ್ಯಕ್ತಿಗೂ ಸಹ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶ ನೀಡಿದ ಹೊರತು ದಂಡವನ್ನು ವಿಧಿಸುವ ಅಥವಾ ಹೆಚ್ಚಿಸುವ ಆದೇಶವನ್ನು ಹೊರಡಿಸತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದಲ್ಲಿ "ಉಚ್ಚ ನ್ಯಾಯಾಲಯ" ಮತ್ತು "ಸಂಸ್ಥೆಯ ಸದಸ್ಯ" ಈ ಪದಗಳು 21ನೇ ಪ್ರಕರಣದಲ್ಲಿ ಹೊಂದಿರುವ ಅರ್ಥವನ್ನೇ ಹೊಂದಿರತಕ್ಕದ್ದು.

## ಅಧ್ಯಾಯ – VI

## ಪ್ರಾದೇಶಿಕ ಪರಿಷತ್ತುಗಳು

**23. ಪ್ರಾದೇಶಿಕ ಪರಿಷತ್ತುಗಳ ರಚನೆ ಮತ್ತು ಪ್ರಕಾರ್ಯಗಳು.–** (1) ತನ್ನ ಪ್ರಕಾರ್ಯಗಳ ಸಂಬಂಧದಲ್ಲಿನ ವಿಷಯಗಳ ಮೇಲೆ ಸಲಹೆ ನೀಡುವ ಮತ್ತು ನೆರವಾಗುವ ಉದ್ದೇಶಕ್ಕಾಗಿ, ಪರಿಷತ್ತು ವಿಹಿತವೆಂದು ಭಾವಿಸುವ ಹಾಗೆ 9ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ಖಂಡದ ಅಡಿಯಲ್ಲಿ ಕೇಂದ್ರ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಒಂದು ಅಥವಾ ಹೆಚ್ಚು ಪ್ರಾದೇಶಿಕ ಮತ ಕ್ಷೇತ್ರಗಳಿಗಾಗಿ ಪ್ರಾದೇಶಿಕ ಪರಿಷತ್ತುಗಳನ್ನು ರಚಿಸಬಹುದು.

(2) ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಾದೇಶಿಕ ಪರಿಷತ್ತುಗಳನ್ನು ರಚಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

## ಅಧ್ಯಾಯ - VII

## ದಂಡನೆಗಳು

**24. ಸದಸ್ಯನೆಂದು ಸುಳ್ಳು ಕ್ಲೇಮು ಮಾಡುವುದು, ಇತ್ಯಾದಿಗಳಿಗಾಗಿ ದಂಡನೆ.–**

**(i)** ಸಂಸ್ಥೆಯ ಸದಸ್ಯನಾಗಿರದ ಯಾರೇ ವ್ಯಕ್ತಿಯು,–

(ಎ) ತಾನು ಸಂಸ್ಥೆಯ ಸದಸ್ಯನೆಂದು ಹೇಳಿಕೊಂಡರೆ; ಅಥವಾ

(ಬಿ) ಚಾರ್ಟರ್ಡ್ ಅಕೌಂಟೆಂಟ್ ಪದನಾಮವನ್ನು ಬಳಸಿದರೆ; ಅಥವಾ

**(ii)** ಸಂಸ್ಥೆಯ ಸದಸ್ಯನಾಗಿದ್ದು, ಆದರೆ ವೃತ್ತಿ ಪ್ರಮಾಣಪತ್ರವನ್ನು ಹೊಂದಿರದೆ, ಚಾರ್ಟರ್ಡ್ ಅಕೌಂಟೆಂಟ್ ಆಗಿ ವೃತ್ತಿ ನಿರತನಾಗಿರುವೆನೆಂದು ಹೇಳಿಕೊಂಡರೆ ಅಥವಾ ಆ ವೃತ್ತಿ ನಡೆಸಿದರೆ

– ಪ್ರಥಮ ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅನಂತರದ ಯಾವುದೇ ಅಪರಾಧ ನಿರ್ಣಯವಾದ ನಂತರ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಯಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**24ಎ. ಪರಿಷತ್ತಿನ ಹೆಸರನ್ನು ಬಳಸುವುದು, ಚಾರ್ಟಡ್ ಅಕೌಂಟೆನ್ಸಿ ಪದವಿ ನೀಡುವುದು, ಇತ್ಯಾದಿಗಳಿಗೆ ದಂಡನೆ.–** (1)ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಯಾರೇ ವ್ಯಕ್ತಿಯು,–

(i) ಸಂಸ್ಥೆಯ ಹೆಸರಿನಂತೆಯೇ ಅಥವಾ ಸಾಮಾನ್ಯ ಮೊಹರಿನಂತೆಯೇ ಇರುವ ಒಂದು ಹೆಸರನ್ನು ಅಥವಾ ಸಾಮಾನ್ಯ ಮೊಹರನ್ನು ಸಾರ್ವಜನಿಕರನ್ನು ಮೋಸಗೊಳಿಸುವಂತೆ ಅಥವಾ ಮೋಸಗೊಳಿಸುವ ಸಂಭವವಿರುವಂತೆ ಬಳಸತಕ್ಕದ್ದಲ್ಲ.

(ii) ಸಂಸ್ಥೆಯ ಸದಸ್ಯನ ಪದವಿ, ಡಿಪ್ಲೊಮಾ ಅಥವಾ ಪ್ರಮಾಣ ಪತ್ರವನ್ನು ಹೋಲುವ ಯಾವುದೇ ಪದವಿ, ಡಿಪ್ಲೊಮಾ ಅಥವಾ ಪ್ರಮಾಣ ಪತ್ರವನ್ನು ನೀಡತಕ್ಕದ್ದಲ್ಲ ಅಥವಾ ಯಾವುದೇ ವಿದ್ಯಾರ್ಹತೆ ಅಥವಾ ಸಕ್ಷಮತೆಯ ಸ್ಥಾನಮಾನ ಅಥವಾ ಪ್ರಾಪ್ತಿಯನ್ನು ಸೂಚಿಸುವ ಅಥವಾ ಸೂಚಿಸುವಂತೆ ತಾತ್ಪರ್ಯವಾಗುವ ಯಾವುದೇ ಪದನಾಮವನ್ನು ಪ್ರದಾನ ಮಾಡತಕ್ಕದ್ದಲ್ಲ.

(iii) ಚಾರ್ಟರ್ಡ್ ಅಕೌಂಟೆಂಟರ ವೃತ್ತಿಯನ್ನು ಯಾವುದೇ ರೀತಿಯಲ್ಲಿ ವಿನಿಯಮಿಸಲು ಅಪೇಕ್ಷಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅವನ ವಿರುದ್ಧ ಕೈಗೊಳ್ಳಬಹುದಾದ ಯಾವುವೇ ಇತರೆ ವ್ಯವಹರಣೆಗಳಿಗೆ ಬಾಧಕವಾಗದಂತೆ, ಮೊದಲನೇ ಅಪರಾಧ ನಿರ್ಣಯಕ್ಕಾಗಿ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯಕ್ಕಾಗಿ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(3) ಈ ಪ್ರಕರಣದಲ್ಲಿರುವುದಾವುದೂ, ಕಾನೂನು ಮೂಲಕ ಸ್ಥಾಪಿಸಲಾದ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಅಥವಾ ಈ ಸಂಸ್ಥೆಗೆ ಸಂಯೋಜಿತವಾದ ಯಾವುದೇ ನಿಕಾಯಕ್ಕೆ ಅನ್ವಯಿಸತಕ್ಕದ್ದಲ್ಲ.

**25. ಕಂಪನಿಗಳು ಅಕೌಂಟೆನ್ಸಿ ವೃತ್ತಿಯಲ್ಲಿ ತೊಡಗದಿರುವುದು.–** (1) ಭಾರತದಲ್ಲಾಗಲಿ ಅಥವಾ ಬೇರೆ ಕಡೆಯಲ್ಲಾಗಲಿ ನಿಗಮಿತವಾಗಿರುವ ಯಾವುದೇ ಕಂಪನಿಯು ಚಾರ್ಟರ್ಡ್ ಅಕೌಂಟೆಂಟ್ ವೃತ್ತಿಯನ್ನು ನಡೆಸತಕ್ಕದ್ದಲ್ಲ.

(2) ಯಾವುದೇ ಕಂಪನಿಯು (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಆಗ, ಆ ಕಂಪನಿಯ ವಿರುದ್ಧ ಕೈಗೊಳ್ಳಬಹುದಾದ ಯಾವುವೇ ಇತರ ವ್ಯವಹರಣೆಗಳಿಗೆ ಬಾಧಕವಾಗದಂತೆ, ಗೊತ್ತಿದ್ದೂ ಅಂಥ ಉಲ್ಲಂಘನೆಗೆ ಪಕ್ಷಕಾರನಾಗಿರುವ ಪ್ರತಿಯೊಬ್ಬ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಮತ್ತು ಅದರ ಯಾರೇ ಇತರ ಅಧಿಕಾರಿಯು ಮೊದಲನೇ ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿವರೆಗೆ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**26. ಅರ್ಹತೆಯಿಲ್ಲದ ವ್ಯಕ್ತಿಗಳು ದಸ್ತಾವೇಜುಗಳಿಗೆ ಸಹಿ ಮಾಡದಿರುವುದು.–** (1) ಸಂಸ್ಥೆಯ ಒಬ್ಬ ಸದಸ್ಯನನ್ನು ಹೊರತುಪಡಿಸಿ ಇತರೆ ಯಾರೇ ವ್ಯಕ್ತಿಯು, ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟನ ಅಥವಾ ಅಂಥ ಚಾರ್ಟರ್ಡ್ ಅಕೌಂಟೆಂಟರ ಫರ್ಮಿನ ಪರವಾಗಿ ಅವನ ಅಥವಾ ಅದರ ವೃತ್ತೀಯ ಸಾಮರ್ಥ್ಯದಲ್ಲಿ ಯಾವುವೇ ದಸ್ತಾವೇಜಿಗೆ ಸಹಿ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು, ಅವನ ವಿರುದ್ಧ ತೆಗೆದುಕೊಳ್ಳಬಹುದಾದ ಯಾವುವೇ ಇತರೆ ವ್ಯವಹರಣೆಗಳಿಗೆ ಬಾಧಕವಾಗದಂತೆ, ಮೊದಲನೇ ಅಪರಾಧ ನಿರ್ಣಯವಾದ ಮೇಲೆ ಒಂದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಯಾವುದೇ ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**27. ಶಾಖಾ ಕಚೇರಿಗಳ ನಿರ್ವಹಣೆ.–** (1) ಒಬ್ಬ ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟನು ಅಥವಾ ಅಂಥ ಚಾರ್ಟರ್ಡ್ ಅಕೌಂಟೆಂಟರ ಒಂದು ಫರ್ಮು ಭಾರತದಲ್ಲಿ ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ಹೊಂದಿರುವಲ್ಲಿ, ಅಂಥ ಪ್ರತಿಯೊಂದು ಕಚೇರಿಯು, ಸಂಸ್ಥೆಯ ಒಬ್ಬ ಸದಸ್ಯನ ಪ್ರತ್ಯೇಕ ಪ್ರಭಾರದಲ್ಲಿರತಕ್ಕದ್ದು:

ಪರಂತು, ಪರಿಷತ್ತು ಸೂಕ್ತ ಪ್ರಕರಣಗಳಲ್ಲಿ ವೃತ್ತಿನಿರತ ಯಾರೇ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಅಂಥ ಚಾರ್ಟರ್ಡ್ ಅಕೌಂಟೆಂಟರ ಒಂದು ಫರ್ಮಿಗೆ ಈ ಉಪಪ್ರಕರಣದ ಪ್ರವರ್ತನೆಯಿಂದ ವಿನಾಯಿತಿ ನೀಡಬಹುದು.

(2) ಒಂದಕ್ಕಿಂತ ಹೆಚ್ಚು ಕಚೇರಿಗಳನ್ನು ನಿರ್ವಹಿಸುವ ಪ್ರತಿಯೊಬ್ಬ ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟನು ಅಥವಾ ಅಂಥ ಚಾರ್ಟರ್ಡ್ ಅಕೌಂಟೆಂಟರ ಪ್ರತಿಯೊಂದು ಫರ್ಮು ತನ್ನ ಕಚೇರಿಗಳ ಮತ್ತು ಅದರ ಪ್ರಭಾರದಲ್ಲಿರುವ ವ್ಯಕ್ತಿಗಳ ಒಂದು ಪಟ್ಟಿಯನ್ನು ಪರಿಷತ್ತಿಗೆ ಕಳುಹಿಸತಕ್ಕದ್ದು ಮತ್ತು ಆ ಸಂಬಂಧದಲ್ಲಿ ಯಾವುವೇ ಬದಲಾವಣೆಗಳಿದ್ದರೆ ಆ ಕುರಿತು ಪರಿಷತ್ತಿಗೆ ಮಾಹಿತಿ ನೀಡತಕ್ಕದ್ದು.

**28. ಪ್ರಾಸಿಕ್ಯೂಷನ್‌ಗೆ ಅನುಮತಿ.–** ಪರಿಷತ್ತಿನ ಅಥವಾ ಕೇಂದ್ರ ಸರ್ಕಾರದ ಆದೇಶದ ಮೂಲಕ ಅಥವಾ ಮೇರೆಗೆ ಸಲ್ಲಿಸಿದ ದೂರಿನ ಹೊರತಾಗಿ ಅಲ್ಲದೆ ಈ ಅಧಿನಿಯಮದ ಅಡಿಯಲ್ಲಿ ಯಾರೇ ವ್ಯಕ್ತಿಯ ವಿರುದ್ಧ ಪ್ರಾಸಿಕ್ಯೂಷನ್ ನಡೆಸತಕ್ಕದ್ದಲ್ಲ.

## ಅಧ್ಯಾಯ – VIII

### ಸಂಕೀರ್ಣ

**29. ಪರಸ್ಪರತೆ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಸಂಬಂಧದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದೇಶವು, ಭಾರತೀಯ ಅಧಿವಾಸಿಗಳನ್ನು ಭಾರತದ ಚಾರ್ಟಡ್ ಅಕೌಂಟೆಂಟ್ ಸಂಸ್ಥೆಯಂಥ ಯಾವುದೇ ಸಮಾನ ಸಂಸ್ಥೆಯ ಸದಸ್ಯನಾಗದಂತೆ ಅಥವಾ ಆ ದೇಶದಲ್ಲಿ ಅಕೌಂಟೆನ್ಸಿ ವೃತ್ತಿಯನ್ನು ನಡೆಸದಂತೆ ತಡೆಯುವ ಅಥವಾ ಅವರನ್ನು ಅನುಚಿತವಾದ ತಾರತಮ್ಯಕ್ಕೆ ಒಳಪಡಿಸುವ ಸಂದರ್ಭದಲ್ಲಿ, ಅಂಥ ಯಾವುದೇ ದೇಶದ ಪ್ರಜೆಯು ಭಾರತದಲ್ಲಿನ ಯಾವುದೇ ಸಂಸ್ಥೆಯ ಒಬ್ಬ ಸದಸ್ಯನಾಗಲು ಅಥವಾ ಭಾರತದಲ್ಲಿ ಅಕೌಂಟೆನ್ಸಿ ವೃತ್ತಿ ನಡೆಸಲು ಅರ್ಹನಾಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಪರಿಷತ್ತು, ಅಕೌಂಟೆನ್ಸಿಗೆ ಸಂಬಂಧಿಸಿದಂತೆ ವಿದೇಶಿ ವಿದ್ಯಾರ್ಹತೆಗಳನ್ನು ರಿಜಿಸ್ಟರಿನಲ್ಲಿ ನಮೂದಿಸುವ ಉದ್ದೇಶಕ್ಕಾಗಿ ಯಾವ ಷರತ್ತುಗಳಿಗೆ ಒಳಪಟ್ಟು ಅಂಗೀಕರಿಸತಕ್ಕದ್ದೋ ಆ ಷರತ್ತುಗಳನ್ನು ಗೊತ್ತುಪಡಿಸಬಹುದು.

**30. ವಿನಿಯಮ ರಚನಾಧಿಕಾರ.–** (1) ಪರಿಷತ್ತು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ವಿನಿಯಮಗಳನ್ನು ರಚಿಸಬಹುದು ಮತ್ತು ಅಂಥ ವಿನಿಯಮಗಳ ಒಂದು ಪ್ರತಿಯನ್ನು ಸಂಸ್ಥೆಯ ಪ್ರತಿಯೊಬ್ಬ ಸದಸ್ಯನಿಗೆ ಕಳುಹಿಸತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ವಿನಿಯಮಗಳು ಕೆಳಕಂಡ ಎಲ್ಲಾ ಅಥವಾ ಆ ಪೈಕಿ ಯಾವುವೇ ವಿಷಯಗಳಿಗಾಗಿ ಉಪಬಂಧಿಸಬಹುದು, ಎಂದರೆ:–

(ಎ) ಈ ಅಧಿನಿಯಮದ ಅಡಿಯಲ್ಲಿ ಪರೀಕ್ಷೆಗಳ ಗುಣಮಟ್ಟ ಮತ್ತು ಅವುಗಳನ್ನು ನಡೆಸುವ ರೀತಿ;

(ಬಿ) ಸಂಸ್ಥೆಯ ಸದಸ್ಯನಾಗಿ ರಿಜಿಸ್ಟರಿನಲ್ಲಿ ತನ್ನ ಹೆಸರನ್ನು ನಮೂದಿಸಿಕೊಳ್ಳಲು ಯಾರೇ ವ್ಯಕ್ತಿಗೆ ಇರಬೇಕಾದ ಅರ್ಹತೆಗಳು;

(ಸಿ) ಯಾವುದೇ ಪರೀಕ್ಷೆ ಮತ್ತು ತರಬೇತಿಯನ್ನು ಸಂಸ್ಥೆಯ ಸದಸ್ಯರ ಸಲುವಾಗಿ ನಿಯಮಿಸಲಾದ ಪರೀಕ್ಷೆ ಮತ್ತು ತರಬೇತಿಗೆ ಸಮಾನವೆಂದು ಯಾವ ಷರತ್ತುಗಳ ಮೇರೆಗೆ ಪರಿಗಣಿಸಬಹುದೋ ಆ ಷರತ್ತುಗಳು;

(ಡಿ) ಯಾವುವೇ ವಿದೇಶೀ ವಿದ್ಯಾರ್ಹತೆಗಳನ್ನು ಯಾವ ಷರತ್ತುಗಳ ಮೇರೆಗೆ ಅಂಗೀಕರಿಸಬಹುದೋ ಆ ಷರತ್ತುಗಳು;

(ಇ) ರಿಜಿಸ್ಟರಿನಲ್ಲಿ ನಮೂದಿಸುವುದಕ್ಕಾಗಿ ಯಾವ ವಿಧಾನ ಮತ್ತು ಷರತ್ತುಗಳಿಗೊಳಪಟ್ಟು ಅರ್ಜಿಯನ್ನು ಸಲ್ಲಿಸಬಹುದೋ ಆ ವಿಧಾನ ಮತ್ತು ಷರತ್ತುಗಳು;

(ಎಫ್) ಸಂಸ್ಥೆಯ ಸದಸ್ಯತ್ವಕ್ಕಾಗಿ ಸಂದಾಯ ಮಾಡಬೇಕಾದ ಫೀಜುಗಳು ಮತ್ತು ಸಂಸ್ಥೆಯ ಸಹಸದಸ್ಯರು ಮತ್ತು ಫೆಲೋ ಸದಸ್ಯರು ತಮ್ಮ ಪ್ರಮಾಣಪತ್ರಗಳ ಸಂಬಂಧದಲ್ಲಿ ಸಂದಾಯ ಮಾಡಬೇಕಾದ ವಾರ್ಷಿಕ ಫೀಜುಗಳು;

(ಜಿ) ಪರಿಷತ್ತಿಗೆ ಮತ್ತು ಪ್ರಾದೇಶಿಕ ಪರಿಷತ್ತುಗಳಿಗೆ ಚುನಾವಣೆಗಳನ್ನು ನಡೆಸಬಹುದಾದ ರೀತಿ;

(ಹೆಚ್) ರಿಜಿಸ್ಟರಿನಲ್ಲಿ ನಮೂದಿಸಬೇಕಾದ ವಿವರಗಳು;

(ಐ) ಪ್ರಾದೇಶಿಕ ಪರಿಷತ್ತುಗಳ ಪ್ರಕಾರ್ಯಗಳು;

(ಜೆ) ನಿಯಮಗಳಿಗೊಳಪಟ್ಟ ಅಭ್ಯಾಸಿ ಮತ್ತು ಲೆಕ್ಕಪರಿಶೋಧಕ ಗುಮಾಸ್ತರ ತರಬೇತಿ, ನಿಯಮ ಗಳಿಗೊಳಪಟ್ಟ ಅಭ್ಯಾಸಿಗಳಿಗೆ ವಿಧಿಸಬಹುದಾದ ಪ್ರೀಮಿಯಂಗಳ ಪರಿಮಿತಿಯನ್ನು ನಿಗದಿಪಡಿಸುವುದು ಮತ್ತು ದುರ್ನಡತೆಯ ಅಥವಾ ಯಾವುದೇ ಇತರೆ ಸಾಕಷ್ಟು ಕಾರಣಕ್ಕಾಗಿ ನಿಯಮಗಳ ರದ್ದಿಯಾತಿ ಮತ್ತು ಲೆಕ್ಕಪರಿಶೋಧನಾ ಸೇವೆಯನ್ನು ಕೊನೆಗೊಳಿಸುವುದು;

(ಕೆ) ಸಂಸ್ಥೆಯ ಸದಸ್ಯರ ವೃತ್ತಿ ಅರ್ಹತೆಗಳ ಸ್ಥಾನಮಾನ ಮತ್ತು ಗುಣಮಟ್ಟವನ್ನು ವಿನಿಯಮಿಸುವುದು ಮತ್ತು ನಿರ್ವಹಿಸುವುದು;

(ಎಲ್) ಅಕೌಂಟೆನ್ಸಿಯಲ್ಲಿ ಸಂಶೋಧನೆ ನಡೆಸುವುದು;

(ಎಂ) ಅಕೌಂಟೆನ್ಸಿಯಲ್ಲಿ ಗ್ರಂಥಾಲಯ ನಿರ್ವಹಣೆ ಮತ್ತು ಅಕೌಂಟೆನ್ಸಿ ಮೇಲಿನ ಪುಸ್ತಕಗಳ ಮತ್ತು ನಿಯತ ಕಾಲಿಕೆಗಳ ಪ್ರಕಟಣೆ;

(ಎನ್) ಪರಿಷತ್ತಿನ ಸ್ವತ್ತಿನ ವ್ಯವಸ್ಥಾಪನೆ ಮತ್ತು ನಿರ್ವಹಣೆ ಹಾಗೂ ಲೆಕ್ಕಪತ್ರಗಳನ್ನು ಇಟ್ಟುಕೊಂಡು ಬರುವುದು ಮತ್ತು ಲೆಕ್ಕಪರಿಶೋಧನೆ;

(ಓ) ಪರಿಷತ್ತಿನ ಸಭೆಗಳನ್ನು ಕರೆಯುವುದು ಮತ್ತು ನಡೆಸುವುದು, ಅಂಥ ಸಭೆಗಳ ಕಾಲ ಮತ್ತು ಸ್ಥಳಗಳು, ಅಲ್ಲಿನ ವ್ಯವಹಾರ ನಡವಳಿಕೆಗಳು ಮತ್ತು ಕೋರಂಗೆ ಅವಶ್ಯವಿರುವ ಸದಸ್ಯರ ಸಂಖ್ಯೆ;

(ಪಿ) ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು;

(ಕ್ಯೂ) ಸ್ಥಾಯಿ ಸಮಿತಿ ಮತ್ತು ಇತರೆ ಸಮಿತಿಗಳ ಪ್ರಕಾರ್ಯಗಳು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸಲು ಷರತ್ತುಗಳು;

(ಆರ್) ಪರಿಷತ್ತಿನ ಕಾರ್ಯದರ್ಶಿ ಮತ್ತು ಇತರೆ ಅಧಿಕಾರಿಗಳ ಮತ್ತು ನೌಕರರ ಪದಾವಧಿ ಮತ್ತು ಅಧಿಕಾರಗಳು, ಕರ್ತವ್ಯಗಳು ಮತ್ತು ಪ್ರಕಾರ್ಯಗಳು;

(ಎಸ್) ಈ ಅಧಿನಿಯಮದ ಮೂಲಕ ಪ್ರದತ್ತವಾದ ಶಿಸ್ತು ಅಧಿಕಾರಗಳನ್ನು ಚಲಾಯಿಸುವುದು; ಮತ್ತು

(ಟಿ) ಈ ಅಧಿನಿಯಮದ ಮೇರೆಗೆ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರೆ ವಿಷಯ.

(3) ಈ ಅಧಿನಿಯಮದ ಅಡಿಯಲ್ಲಿ ಪರಿಷತ್ತು ರಚಿಸಿದ ಎಲ್ಲಾ ವಿನಿಯಮಗಳು ಪೂರ್ವ ಪ್ರಕಟಣೆಯ ಷರತ್ತಿಗೆ ಮತ್ತು ಕೇಂದ್ರ ಸರ್ಕಾರದ ಅನುಮೋದನೆಗೆ ಒಳಪಟ್ಟಿರತಕ್ಕದ್ದು.

(4) (1) ಮತ್ತು (2)ನೇ ಉಪಪ್ರಕರಣಗಳಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಈ ಪ್ರಕರಣದಲ್ಲಿ ಸೂಚಿಸಿರುವ ಉದ್ದೇಶಗಳಿಗಾಗಿ ಪ್ರಥಮವಾಗಿ ವಿನಿಯಮಗಳನ್ನು ರಚಿಸಬಹುದು ಮತ್ತು ಅಂಥ ವಿನಿಯಮಗಳನ್ನು ಪರಿಷತ್ತು ರಚಿಸಿದೆಯೆಂದು ಭಾವಿಸತಕ್ಕದ್ದು ಮತ್ತು ಪರಿಷತ್ತು ಅದನ್ನು ತಿದ್ದುಪಡಿ, ಮಾರ್ಪಾಟು ಅಥವಾ ರದ್ದು ಮಾಡುವವರೆಗೆ ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದಲೇ ಅವು ಜಾರಿಯಲ್ಲಿರತಕ್ಕದ್ದು.

**30ಎ. ವಿನಿಯಮಗಳನ್ನು ರಚಿಸುವಂತೆ ನಿರ್ದೇಶಿಸಲು ಅಥವಾ ವಿನಿಯಮಗಳನ್ನು ರಚಿಸಲು ಅಥವಾ ಅವುಗಳನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರದ ಅಧಿಕಾರಗಳು.–** (1) ಕೇಂದ್ರ ಸರ್ಕಾರವು ನಿರ್ದೇಶನ ನೀಡುವುದು ಯುಕ್ತವೆಂದು ಪರಿಗಣಿಸಿದಲ್ಲಿ, ಲಿಖಿತ ಆದೇಶದ ಮೂಲಕ ತಾನು ಈ ಸಂಬಂಧವಾಗಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಯಾವುವೇ ವಿನಿಯಮಗಳನ್ನು ರಚಿಸುವುದಕ್ಕೆ ಅಥವಾ ಈಗಾಗಲೇ ರಚಿಸಿರುವ ವಿನಿಯಮಗಳನ್ನು ತಿದ್ದುಪಡಿ ಮಾಡುವುದಕ್ಕೆ ಅಥವಾ ರದ್ದುಗೊಳಿಸುವುದಕ್ಕೆ ಪರಿಷತ್ತಿಗೆ ನಿರ್ದೇಶನ ನೀಡಬಹುದು.

(2) ನಿರ್ದಿಷ್ಟಪಡಿಸಿದಂಥ ಅವಧಿಯೊಳಗಾಗಿ, ಪರಿಷತ್ತು ಅಂಥ ಆದೇಶವನ್ನು ಪಾಲಿಸಲು ತಪ್ಪಿದರೆ ಅಥವಾ ನಿರ್ಲಕ್ಷಿಸಿದರೆ, ಕೇಂದ್ರ ಸರ್ಕಾರವು, ಆದೇಶದಲ್ಲಿ ನಿರ್ದಿಷ್ಟಪಡಿಸಿದ ನಮೂನೆಯಲ್ಲಾಗಲಿ ಅಥವಾ ಸಂದರ್ಭಾನುಸಾರ ತಾನು ವಿಹಿತವೆಂದು ಭಾವಿಸುವಂಥ ಮಾರ್ಪಾಟುಗಳೊಂದಿಗಾಗಲಿ, ವಿನಿಯಮಗಳನ್ನು

ರಚಿಸಬಹುದು ಅಥವಾ ಪರಿಷತ್ತು ಮಾಡಿದ ವಿನಿಯಮಗಳನ್ನು ತಿದ್ದುಪಡಿ ಮಾಡಬಹುದು ಅಥವಾ ರದ್ದುಪಡಿಸಬಹುದು.

**30ಬಿ. ವಿನಿಯಮಗಳನ್ನು ಮಂಡಿಸುವುದು.–** ಕೇಂದ್ರ ಸರ್ಕಾರವು, ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಅದರ ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟೋತ್ತರದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ವಿನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**31. ಉಲ್ಲೇಖಗಳ ಅರ್ಥವಿವರಣೆ.–** ಚಾರ್ಟರ್ಡ್ ಅಕೌಂಟೆಂಟ್ ಅಥವಾ ನೋಂದಾಯಿತ ಅಕೌಂಟೆಂಟ್ ಅಥವಾ ಯಾವುದೇ ಇತರೆ ಕಾನೂನಿನ ಅಥವಾ ಯಾವುದಾದರೂ ಇತರೆ ದಸ್ತಾವೇಜಿನಲ್ಲಿನ ಪ್ರಮಾಣೀಕೃತ ಅಥವಾ ಅರ್ಹ ಲೆಕ್ಕ ಪರಿಶೋಧಕರಿಗೆ ಸಂಬಂಧಿಸಿದ ಯಾವುದೇ ಉಲ್ಲೇಖವನ್ನು ಈ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಒಬ್ಬ ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟನಿಗೆ ಮಾಡಿದ ಉಲ್ಲೇಖ ಎಂಬುದಾಗಿ ಅರ್ಥೈಸತಕ್ಕದ್ದು.

**32. ಭಾಗ–ಬಿ ರಾಜ್ಯಗಳಲ್ಲಿ ಅಕೌಂಟೆಂಟರಾಗಿ ವೃತ್ತಿ ನಡೆಸಲು ಅಕೌಂಟೆಂಟರ ಹಕ್ಕುಗಳಿಗೆ ಈ ಅಧಿನಿಯಮವು ಬಾಧಕವನ್ನುಂಟುಮಾಡದಿರುವದು.–** ಈ ಅಧಿನಿಯಮವು ಪ್ರಾರಂಭವಾದಾಗ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಬಿ–ಭಾಗದ ಯಾವುದೇ ರಾಜ್ಯದಲ್ಲಿ ಅಕೌಂಟೆನ್ಸಿ ವೃತ್ತಿಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದಕ್ಕೆ ಹಕ್ಕುಳ್ಳ ಯಾರೇ ವ್ಯಕ್ತಿಯು ಆ ಅಧಿನಿಯಮ ಪ್ರಾರಂಭವಾದ ನಂತರವೂ ಆ ರಾಜ್ಯದಲ್ಲಿ ಅಕೌಂಟೆನ್ಸಿ ವೃತ್ತಿ ನಡೆಸುವುದನ್ನು ಮುಂದುವರೆಸುವುದಕ್ಕೆ ಈ ಅಧಿನಿಯಮದಲ್ಲಿ ಇರುವುದಾವುದೂ ಬಾಧಕವುಂಟು ಮಾಡತಕ್ಕದ್ದಲ್ಲ.

**33. ಭಾರತ ಕಂಪನಿಗಳ ಅಧಿನಿಯಮ, 1913 ಇದರ 144ನೇ ಪ್ರಕರಣದ ತಿದ್ದುಪಡಿ.–**1952ರ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ (1952ರ 48) ಪ್ರಕರಣ 2 ಮತ್ತು ಅನುಸೂಚಿ I – ಇದರ ಮೂಲಕ ನಿರಸನಗೊಳಿಸಲಾಗಿದೆ.

## ಮೊದಲನೆಯ ಅನುಸೂಚಿ

**[21(4) ಮತ್ತು 22ನೇ ಪ್ರಕರಣಗಳನ್ನು ನೋಡಿ]**

### ಭಾಗ – I

### ವೃತ್ತಿ ನಿರತ ಚಾರ್ಟರ್ಡ್ ಅಕೌಂಟೆಂಟರುಗಳ ಸಂಬಂಧದಲ್ಲಿ ವೃತ್ತೀಯ ದುರ್ನಡತೆ

ವೃತ್ತಿ ನಿರತ ಚಾರ್ಟರ್ಡ್ ಅಕೌಂಟೆಂಟ್‌ನನ್ನು ಈ ಕೆಳಕಂಡ ಸಂದರ್ಭಗಳಲ್ಲಿ ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು:–

(1) ಯಾರೇ ವ್ಯಕ್ತಿಯು, ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟ್ ಆಗಿದ್ದು ಅವನೊಂದಿಗೆ ಪಾಲುದಾರನಾಗಿದ್ದ ಅಥವಾ ಅವನಿಂದ ನಿಯೋಜಿತನಾಗಿದ್ದ ಹೊರತು, ಅಂಥ ಯಾರೇ ವ್ಯಕ್ತಿಗೆ ತನ್ನ ಹೆಸರಿನಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಆಗಿ ವೃತ್ತಿ ನಡೆಸುವುದಕ್ಕೆ ಅವಕಾಶ ಮಾಡಿಕೊಡುವುದು;

(2) ಸಂಸ್ಥೆಯ ಸದಸ್ಯನಲ್ಲದ ಅಥವಾ ಪಾಲುದಾರನಲ್ಲದ ಅಥವಾ ನಿವೃತ್ತ ಪಾಲುದಾರನಲ್ಲದ ಅಥವಾ ಮೃತ ಪಾಲುದಾರನ ಕಾನೂನುಬದ್ಧ ಪ್ರತಿನಿಧಿಯಲ್ಲದ ಯಾರೇ ವ್ಯಕ್ತಿಗೆ, ತನ್ನ ವೃತ್ತೀಯ ವ್ಯವಹಾರದ ಫೀಜುಗಳಲ್ಲಿ ಅಥವಾ ಲಾಭಗಳಲ್ಲಿ ಯಾವುದೇ ಪಾಲನ್ನು, ವೆಚ್ಚವನ್ನು ಅಥವಾ ದಳ್ಳಾಳಿ ರುಸುಮನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂದಾಯ ಮಾಡುವುದು ಅಥವಾ ಅನುಮತಿಸುವುದು ಅಥವಾ ಸಂದಾಯ ಮಾಡಲು ಅಥವಾ ಅನುಮತಿಸಲು ಒಪ್ಪುವುದು;

**ವಿವರಣೆ.–** "ಪಾಲುದಾರ" ಎಂಬ ಬಾಬಿನಲ್ಲಿ ಭಾರತದ ಹೊರಗಡೆ ವಾಸಿಸುತ್ತಿರುವ ಯಾವ ವ್ಯಕ್ತಿಯೊಂದಿಗೆ ವೃತ್ತಿ ನಿರತ ಚಾರ್ಟರ್ಡ್ ಅಕೌಂಟೆಂಟ್‌ನು ಈ ಭಾಗದ (4)ನೇ ಬಾಬಿನ ಉಲ್ಲಂಘನೆಯಾಗದಂತೆ, ಪಾಲುದಾರಿಕೆಯ ಒಪ್ಪಂದ ಮಾಡಿಕೊಂಡಿರುವನೋ ಆ ವ್ಯಕ್ತಿಯೂ ಸೇರುತ್ತಾನೆ.

(3) ಸಂಸ್ಥೆಯ ಸದಸ್ಯನಲ್ಲದ ವಕೀಲ, ಹರಾಜುಗಾರ, ದಲ್ಲಾಳಿ ಅಥವಾ ಇತರೆ ಏಜೆಂಟನ ವೃತ್ತೀಯ ಕೆಲಸದ ಲಾಭಗಳ ಯಾವುದೇ ಭಾಗವನ್ನು ಸ್ವೀಕರಿಸುವುದು ಅಥವಾ ಸ್ವೀಕರಿಸಲು ಒಪ್ಪುವುದು;

(4) ವೃತ್ತಿನಿರತ ಚಾರ್ಟರ್ಡ್ ಅಕೌಂಟೆಂಟ್ ಅಲ್ಲದ ಯಾರೇ ವ್ಯಕ್ತಿಯೊಂದಿಗೆ ಅಥವಾ ಭಾರತದ ಹೊರಗಡೆ ನಿವಾಸಿಯಾಗಿರುವ ಯಾರೇ ವ್ಯಕ್ತಿಯು, ಅವನು ವಿದೇಶದಲ್ಲಿ ನಿವಾಸಿಯಾಗಿರದಿದ್ದರೆ 4ನೇ ಪ್ರಕರಣದ (1)ನೇ ಉಪಪ್ರಕರಣದ (V)ನೇ ಖಂಡದ ಮೇರೆಗೆ ಸದಸ್ಯನಾಗಿ ನೋಂದಾಯಿಸಿಕೊಳ್ಳಲು ಹಕ್ಕುಳ್ಳವನಾಗಬಹುದಿತ್ತೋ ಅಥವಾ ಪಾಲುಗಾರಿಕೆಗೆ ಅನುಮತಿಸುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರ ಅಥವಾ ಪರಿಷತ್ತು ಅವನ ವಿದ್ಯಾರ್ಹತೆಗಳನ್ನು ಅಂಗೀಕರಿಸಲಾಗಿದೆಯೋ ಅಂಥ ವ್ಯಕ್ತಿಯೊಂದಿಗೆ ಪಾಲುದಾರಿಕೆಯ ಒಪ್ಪಂದ ಮಾಡಿಕೊಳ್ಳುವುದು; ಪರಂತು, ಆ ಚಾರ್ಟರ್ಡ್ ಅಕೌಂಟೆಂಟನು ಭಾರತದೊಳಗಡೆ ಮತ್ತು ಭಾರತದ ಹೊರಗಡೆ ಎರಡರಲ್ಲೂ ಪಾಲುಗಾರಿಕೆಯ ವ್ಯವಹಾರದ ಫೀಜುಗಳಲ್ಲಿ ಅಥವಾ ಲಾಭಗಳಲ್ಲಿ ಪಾಲುದಾರನಾಗಿರಬೇಕು;

(5) ಅವನು ಪಾಲುದಾರನಾಗಲು ಅರ್ಹನಲ್ಲದ ವ್ಯಕ್ತಿಯ ಸೇವೆಯ ಮೂಲಕವಾಗಲಿ ಅಥವಾ ಚಾರ್ಟರ್ಡ್ ಅಕೌಂಟೆಂಟನಿಗೆ ಅವಕಾಶವಿಲ್ಲದ ಸಾಧನಗಳ ಮೂಲಕವಾಗಲಿ ಯಾವುದೇ ವೃತ್ತೀಯ ವ್ಯವಹಾರವನ್ನು ಪಡೆದುಕೊಳ್ಳುವುದು;

(6) ಸುತ್ತೋಲೆ, ಜಾಹಿರಾತು, ವೈಯುಕ್ತಿಕ ಸಂಪರ್ಕ ಅಥವಾ ಸಂದರ್ಶನ ಅಥವಾ ಯಾವುದೇ ಇತರೆ ಸಾಧನಗಳ ಮೂಲಕ ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಕಕ್ಷಿದಾರರನ್ನು ಅಥವಾ ವೃತ್ತೀಯ ಕೆಲಸವನ್ನು ಆಹ್ವಾನಿಸುವುದು;

(7) ವೃತ್ತೀಯ ಸಾಧನೆಗಳನ್ನು ಅಥವಾ ಸೇವೆಗಳನ್ನು ಜಾಹೀರುಪಡಿಸುವುದು ಅಥವಾ ಚಾರ್ಟರ್ಡ್ ಅಕೌಂಟೆಂಟ್ ಎಂಬುದರ ಹೊರತಾಗಿ, ಭಾರತದಲ್ಲಿ ಕಾನೂನು ಮೂಲಕ ಸ್ಥಾಪಿಸಿದ ವಿಶ್ವವಿದ್ಯಾಲಯದ ಅಥವಾ ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದ ಪದವಿಯಾಗಿದ್ದ ಹೊರತು, ಯಾವುದೇ ಪದನಾಮ ಅಥವಾ ಪದಾವಳಿಗಳನ್ನು ವೃತ್ತೀಯ ದಸ್ತಾವೇಜುಗಳ, ಸಂದರ್ಶನ ಕಾರ್ಡುಗಳ, ವಿಳಾಸದೋಲೆಗಳ ಅಥವಾ ಗುರುತು ಹಲಗೆಗಳ ಮೇಲೆ ಬಳಸುವುದು ಅಥವಾ ಚಾರ್ಟರ್ಡ್ ಅಕೌಂಟೆಂಟ್ ಸಂಸ್ಥೆಯ ಅಥವಾ ಕೇಂದ್ರ ಸರ್ಕಾರದಿಂದ ಮನ್ನಣೆ ಪಡೆದ ಅಥವಾ ಪರಿಷತ್ತಿನಿಂದ ಮನ್ನಣೆ ಪಡೆಯಬಹುದಾದ ಯಾವುದೇ ಇತರ ಸಂಸ್ಥೆಯ ಸದಸ್ಯತ್ವವನ್ನು ಸೂಚಿಸುವ ಬಿರುದನ್ನು ಬಳಸುವುದು;

(8) ಮತ್ತೊಬ್ಬ ಚಾರ್ಟರ್ಡ್ ಅಕೌಂಟೆಂಟನು ಅಥವಾ ನಿರ್ಬಂಧಿತ ರಾಜ್ಯ ಲೆಕ್ಕಪರಿಶೋಧಕನು ಈ ಹಿಂದೆ ಧಾರಣ ಮಾಡಿದ್ದ ಲೆಕ್ಕಪರಿಶೋಧಕನ ಸ್ಥಾನವನ್ನು ಅವನಿಗೆ ಲಿಖಿತದಲ್ಲಿ ತಿಳಿಸದೇ ಸ್ಥಾನವನ್ನು ಒಪ್ಪಿಕೊಳ್ಳುವುದು;

(9) ಒಂದು ಕಂಪನಿಯ ಲೆಕ್ಕಪರಿಶೋಧಕನ ನೇಮಕಾತಿಗೆ ಸಂಬಂಧಿಸಿದಂತೆ, ಕಂಪನಿಗಳ ಅಧಿನಿಯಮ, 1956 (1956ರ 1)ರ 225ನೇ ಪ್ರಕರಣದ ಅಗತ್ಯತೆಗಳನ್ನು ಯುಕ್ತವಾಗಿ ಪಾಲಿಸಲಾಗಿದೆಯೋ ಇಲ್ಲವೋ ಎಂಬುದನ್ನು ಮೊದಲು ಸುನಿಶ್ಚಿತಗೊಳಿಸಿಕೊಳ್ಳದೆ ಅಂಥ ನೇಮಕಾತಿಯನ್ನು ಒಪ್ಪಿಕೊಳ್ಳುವುದು;

(10) ಈ ಅಧಿನಿಯಮದ ಮೇರೆಗೆ ರಚಿಸಿದ ಯಾವುವೇ ವಿನಿಯಮಗಳ ಅಡಿಯಲ್ಲಿ ಅನುಮತಿಸಲಾದ ಪ್ರಕರಣಗಳ ಹೊರತು ಯಾವುದೇ ವೃತ್ತೀಯ ನಿಯೋಜನೆ ಸಂಬಂಧದಲ್ಲಿ ಲಾಭಾಂಶಗಳ ಶೇಕಡಾವಾರಿನ ಮೇಲೆ ಆಧಾರಿತವಾದಂಥ ಅಥವಾ ಅಂಥ ನಿಯೋಜನೆಯ ನಿರ್ಣಯಗಳ ಅಥವಾ ಫಲಿತಾಂಶಗಳ ಮೇಲೆ ಅವಲಂಬಿತವಾದ ಫೀಜುಗಳನ್ನು ಖರ್ಚು ಹಾಕುವುದು ಅಥವಾ ಖರ್ಚುಹಾಕಲು ಉದ್ದೇಶಿಸುವುದು, ಅಂಗೀಕರಿಸುವುದು ಅಥವಾ ಅಂಗೀಕರಿಸಲು ಉದ್ದೇಶಿಸುವುದು;

(11) ಚಾರ್ಟರ್ಡ್ ಅಕೌಂಟೆಂಟ್ ವೃತ್ತಿಯಲ್ಲದೆ ಬೇರೆ ಯಾವುದೇ ವ್ಯವಹಾರ ಅಥವಾ ವೃತ್ತಿಯಲ್ಲಿ ತೊಡಗಲು ಪರಿಷತ್ತು ಅನುಮತಿಸಿದ್ದ ಹೊರತು ಹಾಗೆ ತೊಡಗುವುದು:

ಪರಂತು, ಇದರಲ್ಲಿ ಇರುವುದಾವುದೂ, ಒಬ್ಬ ಚಾರ್ಟರ್ಡ್ ಅಕೌಂಟೆಂಟ್ ಅಥವಾ ಅವನ ಯಾರೇ ಪಾಲುದಾರನು ಒಂದು ಕಂಪನಿಯಲ್ಲಿ ಲೆಕ್ಕಪರಿಶೋಧಕನಾಗಿ ಹಿತಾಸಕ್ತಿ ಹೊಂದಿದ್ದ ಹೊರತು, ಅವನನ್ನು ಕಂಪನಿಯ ನಿರ್ದೇಶಕನಾಗದಂತೆ ಅವನ ಹಕ್ಕನ್ನು ಕಸಿದುಕೊಳ್ಳತಕ್ಕದ್ದಲ್ಲ;

(12) ಯಾರೇ ಇತರ ಚಾರ್ಟರ್ಡ್ ಅಕೌಂಟೆಂಟನು ಅಥವಾ ನಿರ್ಬಂಧಿತ ರಾಜ್ಯ ಲೆಕ್ಕಪರಿಶೋಧಕನು ಈ ಹಿಂದೆ ಲೆಕ್ಕಪರಿಶೋಧಕನಾಗಿ ಧಾರಣ ಮಾಡಿದ್ದ ಸ್ಥಾನವನ್ನು ಕೊರೆಗೊಳಿಸುವ ಪರಿಸ್ಥಿತಿಗಳಲ್ಲಿ ಒಪ್ಪಿಕೊಳ್ಳುವುದು;

(13) ಸಂಸ್ಥೆಯ ಸದಸ್ಯನಲ್ಲದ ವ್ಯಕ್ತಿಗೆ ಅಥವಾ ಅವನ ಪಾಲುದಾರನಲ್ಲದ ಸದಸ್ಯನಿಗೆ ಯಾವುದೇ ಜಮಾ ಖರ್ಚುಪಟ್ಟಿ, ಲಾಭ- ನಷ್ಟದ ಲೆಕ್ಕ ವರದಿ ಅಥವಾ ಹಣಕಾಸು ವಿವರಣಾ ತಃಖ್ತೆ – ಇವುಗಳಿಗೆ ಅವನ ಪರವಾಗಿ ಅಥವಾ ಅವನ ವ್ಯವಹಾರ ಸಂಸ್ಥೆಯ ಪರವಾಗಿ ಸಹಿಮಾಡಲು ಅವಕಾಶ ಕೊಡುವುದು.

## ಭಾಗ – II

### ಸೇವೆಯಲ್ಲಿರುವ ಸಂಸ್ಥೆಯ ಸದಸ್ಯರ ಸಂಬಂಧದಲ್ಲಿ ವೃತ್ತೀಯ ದುರ್ನಡತೆ

ಸಂಸ್ಥೆಯ ಒಬ್ಬ ಸದಸ್ಯನು (ವೃತ್ತಿನಿರತ ಸದಸ್ಯನನ್ನು ಹೊರತುಪಡಿಸಿ) ಯಾವುದೇ ಕಂಪನಿಯ, ಫರ್ಮಿನ ಅಥವಾ ವ್ಯಕ್ತಿಯ ನೌಕರನಾಗಿದ್ದು,–

(ಎ) ಸದಸ್ಯನು ಕೈಗೊಂಡಿರುವ ನೌಕರಿಯ ಒಟ್ಟು ಉಪಲಬ್ಧಿಗಳಲ್ಲಿನ ಯಾವುದೇ ಪಾಲನ್ನು ಯಾರೇ ವ್ಯಕ್ತಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂದಾಯ ಮಾಡಿದರೆ ಅಥವಾ ಸಂದಾಯ ಮಾಡಲು ಅವಕಾಶ ನೀಡಿದರೆ ಅಥವಾ ಸಂದಾಯ ಮಾಡಲು ಒಪ್ಪಿದರೆ;

(ಬಿ) ಯಾವುದೇ ಕಂಪನಿ, ಫರ್ಮು ಅಥವಾ ವ್ಯಕ್ತಿಯು ನಿಯೋಜಿಸಿಕೊಂಡ ವಕೀಲ, ಚಾರ್ಟರ್ಡ್ ಅಕೌಂಟೆಂಟ್ ಅಥವಾ ದಲ್ಲಾಳಿ ಅಥವಾ ಅಂಥ ಯಾವುದೇ ಕಂಪನಿ, ಫರ್ಮು ಅಥವಾ ವ್ಯಕ್ತಿಯ ಏಜೆಂಟ್ ಅಥವಾ ಗ್ರಾಹಕ – ಇವರ ಕಡೆಯಿಂದ ದಲ್ಲಾಳಿ, ರುಸುಮು ಅಥವಾ ಪಾರಿತೋಷಕವಾಗಿ ಫೀಜುಗಳ, ಲಾಭಗಳ ಅಥವಾ ಗಳಿಕೆಗಳ ಯಾವುದೇ ಭಾಗವನ್ನು ಸ್ವೀಕರಿಸಿದರೆ ಅಥವಾ ಸ್ವೀಕರಿಸಲು ಒಪ್ಪಿದರೆ;

(ಸಿ) ಕಾನೂನು ಮೂಲಕ ಅಗತ್ಯಪಡಿಸಿದಾಗ ಹೊರತು ಅಥವಾ ನಿಯೋಜಕನು ಅನುಮತಿಸಿದ ಹೊರತು ತನ್ನ ನಿಯೋಜನೆಯ ಅವಧಿಯಲ್ಲಿ ಪಡೆದುಕೊಂಡ ರಹಸ್ಯ ಮಾಹಿತಿಯನ್ನು ಬಹಿರಂಗಪಡಿಸಿದರೆ

– ಅವನನ್ನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು.

## ಭಾಗ – III

### ಸಾಮಾನ್ಯವಾಗಿ ಸಂಸ್ಥೆಯ ಸದಸ್ಯರ ಸಂಬಂಧದಲ್ಲಿ ವೃತ್ತೀಯ ದುರ್ನಡತೆ

ಸಂಸ್ಥೆಯ ಒಬ್ಬ ಸದಸ್ಯನು, ವೃತ್ತಿಯಲ್ಲಿರಲಿ ಅಥವಾ ಇಲ್ಲದಿರಲಿ, ಅವನು,–

(1) ಯಾವುವೇ ವಿವರಗಳು ಅವನಿಗೆ ಸುಳ್ಳು ಎಂದು ಗೊತ್ತಿದ್ದರೂ ಅವುಗಳನ್ನು ಪರಿಷತ್ತಿಗೆ ಸಲ್ಲಿಸಬೇಕಾದ ಯಾವುವೇ ವಿವರಪಟ್ಟಿಕೆ, ವಿವರಣ ತಃಖ್ತೆ ಅಥವಾ ಯಾವುವೇ ನಮೂನೆಯಲ್ಲಿ ಅವುಗಳನ್ನು ಸೇರಿಸಿದರೆ;

(2) ತಾನು ಫೆಲೋ ಸದಸ್ಯ ಆಗಿರದಿದ್ದರೂ ಫೆಲೋ ಸದಸ್ಯ ಎಂಬಂತೆ ವರ್ತಿಸಿದರೆ;

(3) ಪರಿಷತ್ತು ಅಥವಾ ಅದರ ಸಮಿತಿಗಳು ಕೇಳಿದ ಮಾಹಿತಿಯನ್ನು ಒದಗಿಸದಿದ್ದರೆ ಅಥವಾ ಕೇಳಿದ ಅಗತ್ಯತೆಗಳನ್ನು ಪೂರೈಸದಿದ್ದರೆ,

– ಅವನನ್ನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು.

## ಎರಡನೆಯ ಅನುಸೂಚಿ

**[(21 (5) ಮತ್ತು 22ನೇ ಪ್ರಕರಣಗಳನ್ನು ನೋಡಿ)]**

## ಭಾಗ –I

## ವೃತ್ತಿ ನಿರತ ಚಾರ್ಟರ್ಡ್ ಅಕೌಂಟೆಂಟನಿಗೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದ ಕ್ರಮವು ಅಗತ್ಯವಾಗುವಂಥ ವೃತ್ತೀಯ ದುರ್ನಡತೆ

ಒಬ್ಬ ವೃತ್ತಿ ನಿರತ ಚಾರ್ಟರ್ಡ್ ಅಕೌಂಟೆಂಟನು ಈ ಕೆಳಕಂಡವುಗಳನ್ನು ಎಸಗಿದರೆ ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು,-

(1) ಅವನು ವೃತ್ತಿಯಲ್ಲಿ ತೊಡಗಿರುವ ಅವಧಿಯಲ್ಲಿ ಅವನಿಗೆ ದೊರಕಿದ ಮಾಹಿತಿಯನ್ನು ತನ್ನ ಕಕ್ಷಿಗಾರನ ಸಮ್ಮತಿಯಿಲ್ಲದೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಅಗತ್ಯಪಡಿಸಿದಲ್ಲದೆ ಅನ್ಯಥಾ ಕಕ್ಷಿಗಾರನಿಗಲ್ಲದೆ ಯಾರೇ ಇತರೆ ವ್ಯಕ್ತಿಗೆ ವಿಷಯವನ್ನು ಬಹಿರಂಗಪಡಿಸುವುದು;

(2) ಹಣಕಾಸು ವಿವರ ಪತ್ರಗಳನ್ನು ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಅವನು ಅಥವಾ ಅವನ ಪಾಲುದಾರನು ಅಥವಾ ಅವನ ಫರ್ಮಿನ ನೌಕರ ಅಥವಾ ವೃತ್ತಿನಿರತ ಮತ್ತೊಬ್ಬ ಚಾರ್ಟರ್ಡ್ ಅಕೌಂಟೆಂಟನು ಪರೀಕ್ಷಿಸಿದ ಹೊರತು, ಅವುಗಳ ಪರೀಕ್ಷಾ ವರದಿಯನ್ನು ಅವನ ಹೆಸರಿನಲ್ಲಿ ಅಥವಾ ಅವನ ಫರ್ಮಿನ ಹೆಸರಿನಲ್ಲಿ ಪ್ರಮಾಣೀಕರಿಸುವುದು ಅಥವಾ ಒಪ್ಪಿಸುವುದು;

(3) ಭವಿಷ್ಯದ ವಹಿವಾಟುಗಳ ಮೇಲೆ ಅವಲಂಬಿಸಿರುವ ಗಳಿಕೆಗಳ ಅಂದಾಜಿಗೆ ಸಂಬಂಧಿಸಿದಂತೆ, ಮುನ್ಸೂಚನೆಯ ನಿಖರತೆಯ ಸಲುವಾಗಿ ತಾನು ದೃಢಪಡಿಸುವನೆಂಬ ನಂಬಿಕೆ ಹುಟ್ಟುವ ಹಾಗೆ ತನ್ನ ಅಥವಾ ತನ್ನ ಫರ್ಮಿನ ಹೆಸರನ್ನು ಬಳಸಲು ಅನುಮತಿಸುವುದು;

(4) ಅವನು ತನ್ನ ಹಿತಾಸಕ್ತಿಯನ್ನು ವರದಿಯಲ್ಲಿ ಸಹ ಬಹಿರಂಗಪಡಿಸಿದ್ದ ಹೊರತು ಅವನ ಫರ್ಮಿನ ಅಥವಾ ಅವನ ಫರ್ಮಿನ ಯಾರೇ ಪಾಲುದಾರನು ಗಣನೀಯ ಹಿತಾಸಕ್ತಿಯಲ್ಲಿ ಹೊಂದಿರುವ ಯಾವುದೇ ವ್ಯವಹಾರದ ಅಥವಾ ಯಾವುದೇ ಉದ್ಯಮದ ಹಣಕಾಸು ವಿವರ ಪತ್ರಗಳ ಮೇಲೆ ತನ್ನ ಅಭಿಪ್ರಾಯ ವ್ಯಕ್ತಪಡಿಸುವುದು;

(5) ಅವನಿಗೆ ತಿಳಿದಿರುವ, ಆದರೆ, ಹಣಕಾಸು ವಿವರ ಪತ್ರದಲ್ಲಿ ಬಹಿರಂಗಪಡಿಸದಿರುವ ಯಾವ ಮುಖ್ಯ ಸಂಗತಿಯ ಬಹಿರಂಗವು ಹಣಕಾಸು ವಿವರ ಪತ್ರದ ಅಪಾರ್ಥವಾಗದಂತೆ ಮಾಡಲು ಅವಶ್ಯವಾಗಿರುವುದೋ ಅದನ್ನು ಬಹಿರಂಗಪಡಿಸಲು ತಪ್ಪುವುದು;

(6) ಹಣಕಾಸು ವಿವರಪತ್ರವು ಮುಖ್ಯವಾದ ತಪ್ಪು ವಿವರಣೆಗಳೊಂದಿಗೆ ಕೂಡಿದೆ ಎಂದು ಅವನ ವೃತ್ತೀಯ ಸಾಮರ್ಥ್ಯದಲ್ಲಿ ಗೊತ್ತಿದ್ದರೂ ಅದನ್ನು ವರದಿ ಮಾಡಲು ತಪ್ಪುವುದು;

(7) ಅವನ ವೃತ್ತೀಯ ಕರ್ತವ್ಯಗಳ ನಿರ್ವಹಣೆಯಲ್ಲಿ ಸಂಪೂರ್ಣ ನಿರ್ಲಕ್ಷ್ಯನಾಗಿರುವುದು ;

(8) ಒಂದು ಅಭಿಪ್ರಾಯವನ್ನು ವ್ಯಕ್ತಗೊಳಿಸಲು ಅಗತ್ಯಗೊಳಿಸುವಂಥ ಸಾಕಷ್ಟು ಮಾಹಿತಿಯನ್ನು ಪಡೆದುಕೊಳ್ಳಲು ತಪ್ಪುವುದು ಅಥವಾ ಅವನ ಅಪವಾದಗಳು ಒಂದು ಅಭಿಪ್ರಾಯದ ಅಭಿವ್ಯಕ್ತಿಯನ್ನು ನಿರಾಕರಿಸಲು ಸಾಕಷ್ಟು ಮಾಹಿತಿಯನ್ನು ಒದಗಿಸದಿರುವುದು;

(9) ಸನ್ನಿವೇಶಗಳಿಗೆ ಅನ್ವಯವಾಗುವ ಲೆಕ್ಕಪರಿಶೋಧನೆಯ ಅಂಗೀಕೃತ ಕಾರ್ಯವಿಧಾನದಿಂದ ಮಾಡಲಾಗದ ಯಾವುದೇ ಮುಖ್ಯ ವಿಷಯಾಂತರದ ಬಗ್ಗೆ ಗಮನಸೆಳೆಯಲು ತಪ್ಪುವುದು;

(10) ತನ್ನ ಕಕ್ಷಿದಾರನ ಹಣವನ್ನು ಪ್ರತ್ಯೇಕ ಬ್ಯಾಂಕು ಖಾತೆಯಲ್ಲಿ ಇಡಲು ತಪ್ಪುವುದು ಅಥವಾ ಯಾವ ಉದ್ದೇಶಕ್ಕಾಗಿ ಅದನ್ನು ಬಳಸಬೇಕಾಗಿತ್ತೋ ಹಾಗೆ ಬಳಸಲು ತಪ್ಪುವುದು.

## ಭಾಗ - II

## ಸಂಸ್ಥೆಯ ಸದಸ್ಯರಿಗೆ ಸಂಬಂಧಪಟ್ಟಂತೆ ಸಾಮಾನ್ಯವಾಗಿ ಒಂದು ಉಚ್ಚ ನ್ಯಾಯಾಲಯದ ಕ್ರಮವು ಅಗತ್ಯವಾಗುವಂಥ ವೃತ್ತೀಯ ದುರ್ನಡತೆ

ಸಂಸ್ಥೆಯ ಸದಸ್ಯನು, ತಾನು ವೃತ್ತಿಯಲ್ಲಿರಲಿ ಅಥವಾ ಇಲ್ಲದಿರಲಿ, –

**(i)** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ವಿನಿಯಮಗಳ ಯಾವುದೇ ಉಪಬಂಧವನ್ನು ಉಲ್ಲಂಘಿಸಿದರೆ;

**(ii)** ಭಾರತದ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪರಿಷತ್ತು ನಿರ್ದಿಷ್ಟಪಡಿಸಬಹುದಾದಂಥ ಇತರೆ ಕಾರ್ಯ ಅಥವಾ ಕಾರ್ಯಲೋಪದ ತಪ್ಪಿತಸ್ಥನಾದರೆ

– ಅವನು ವೃತ್ತೀಯ ದುರ್ನಡತೆಯ ತಪ್ಪಿತಸ್ಥನೆಂಬುದಾಗಿ ಭಾವಿಸತಕ್ಕದ್ದು.

* * * * *